ಛೇರ್ಮನ್:- ಪ್ರಸ್ತಾವ ಏನೆಂದರೆ "ತಿದ್ದುಪಡಿಯಾದ 3ನೇ ಖಂಡ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 3 ತಿದ್ದುಪಡಿಯೊಂದಿಗೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 4 ರಿಂದ 6ರವರೆಗೆ

ಛೇರ್ಮನ್:- "ಖಂಡ 4 ರಿಂದ 6ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ :"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 4 ರಿಂದ 6ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಛೇರ್ಮನ್:- ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘ್ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ, ದೀರ್ಘ್ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

Sri AZEEZ SAIT: (Minister for Transport):- Sir, I request that the Karnataka Motor Vehicles Taxation (Amemdment) Bill 1992 as amended may kindly be passed.

ಛೇರ್ಮನ್:- ಪ್ರಸ್ತಾವ ಏನೆಂದರೆ : 1992ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

1992 ರ ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೇ, 1992ರ ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, Section-77ಕ್ಕೆ ತಿದ್ದುಪಡಿಯನ್ನು ತಂದಿರತಕ್ಕ ಕಾರಣವೇನೆಂದರೆ, ಈಗ ಹೆಚ್ಚುವರಿ ಭೂಮಿಯನ್ನು ಎಸ್.ಸಿ. ಮತ್ತು ಎಸ್.ಟಿ. ಜನಾಂಗದವರಿಗೆ 50 ಪರ್ಸೆಂಟ್ ಮಾತ್ರ ಕೊಡತಕ್ಕದ್ದು ಇದೆ. ಇದನ್ನು 75 ಪರ್‌ಸೆಂಟ್ ಕೊಡಬೇಕು ಎನ್ನತಕ್ಕ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ. ಮತ್ತು ಸೆಕ್ಷನ್109 ರಲ್ಲಿ ಇದೇ ಸದನದಲ್ಲಿ ಅನೇಕ ಮಾನ್ಯ ಸದಸ್ಯರು ಶಾಲೆಗಳು, ಆಸ್ಪತ್ರೆಗಳು ಮತ್ತು ಕೈಗಾರಿಕೆಗಳಿಗೆ ಕನಿಷ್ಟಪಕ್ಷ ಒಂದು ಯುನಿಟ್ ಆದರೂ ಜಮೀನು ತೆಗೆದುಕೊಳ್ಳತಕ್ಕದ್ದು ಮತ್ತು ಕೈಗಾರಿಕೆಗಳಿಗೆ ಎರಡು ಯೂನಿಟ್ ತೆಗೆದುಕೊಳ್ಳತಕ್ಕದ್ದಾದರೂ ಪರವಾನಗಿ ಇರಬೇಕೆಂದು ಕೇಳಿದ್ದರು. ಮಾನ್ಯ ಸದಸ್ಯರ ಸಲಹೆಯ ಪ್ರಕಾರ ಈ ಒಂದು

ತಿದ್ದುಪಡಿಯನ್ನು ತಂದಿದ್ದೇವೆ. ಇದರಿಂದ ಕೈಗಾರಿಕೆಗಳಿಗೆ ಸ್ಕೂಲ್‌ಗಳಿಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ಒಂದು ತಿದ್ದುಪಡಿ ಇದೆ. ಮತ್ತು ಸೆಕ್ಷನ್ 122 (ಎ) ಯಲ್ಲಿ ಈಗಾಗಲೇ ತಮಗೆ ಗೊತ್ತಿರುವ ಹಾಗೆ ಮೊನ್ನೆ ಮಾನ್ಯ ಪ್ರಧಾನಮಂತ್ರಿಗಳ ಕಾನ್ಫರೆನ್ಸ್‌ನಲ್ಲಿ ಹೆಚ್ಚುವರಿ ಜಮೀನನ್ನು ಬಹಳ ತೀವ್ರಗತಿಯಲ್ಲಿ ಹಂಚಬೇಕು ಮತ್ತು ಅದರಲ್ಲಿ ವಿಶೇಷವಾಗಿ ಬೇನಾಮಿಯಾಗಿ ಟ್ರಾನ್ಸ್‌ಯಾಕ್ಷನ್ ಆಗಿರತಕ್ಕದ್ದು ಅಥವಾ fraudulent ಮತ್ತು mis-represent ಮಾಡಿ ಕೆಲವು ಡಿಕ್ಲರೇಷನ್ಸ್ ಫೈಲ್ ಮಾಡಿಕೊಂಡು ಅವರು ಸರ್‌ಪ್ಲಸ್ ಲ್ಯಾಂಡ್ ಕೆಲವು ಕಡೆ suppress ಮಾಡಿದ್ದಾರೆ. ಆದುದರಿಂದ ಅದನ್ನು ಪುನ: 31-12-1995ರ ವರೆಗೆ ಡೇಟನ್ನು ವಿಸ್ತರಣೆ ಮಾಡಿದ್ದೇವೆ. ಬಹುಶ: ಅಂಥ ಸಪ್ರೆಸ್ ಆಗಿರುವುದು, ಬೇನಾಮಿ ಟ್ರಾನ್ಸ್‌ಯಾಕ್ಷನ್ಸ್, ಹೆಚ್ಚುವರಿ ಜಮೀನು ತೆಗೆದುಕೊಂಡಿರುವ ಅನೇಕ ಜನ ಈ ಪರ್‌ಫ್ಯೂಮಿನಿಂದ ಏನು ತಪ್ಪಿಸಿಕೊಂಡಿದ್ದಾರೆ ಅಂಥಾದ್ದನ್ನೆಲ್ಲ ತೆಗೆಯಬೇಕು ಎನ್ನತಕ್ಕ ದೃಷ್ಟಿಯಿಂದ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಬಹುಶ: ಇದಕ್ಕೆ ಎಲ್ಲರೂ ಕೂಡ ಒಪ್ಪಿಗೆಯನ್ನು ಕೊಡಬೇಕೆಂದು ತಮ್ಮ ಮುಖಾಂತರ ಅವರನ್ನು ಕೇಳುತ್ತಿದ್ದೇನೆ.

+ಶ್ರಿ ಡಿ.ಬಿ.ಚಂದ್ರೇಗೌಡ: (ವಿರೋಧಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಈ ಮಸೂದೆಯಲ್ಲಿ ಎರಡು ಮೂರು ವಿಚಾರಗಳನ್ನು ಒಟ್ಟಿಗೆ ಸೇರಿಸಿಬಿಟ್ಟಿದ್ದಾರೆ. ನಿಮಗೆ ಸರ್‌ಪ್ಲಸ್ ಲ್ಯಾಂಡ್ ಎಷ್ಟು ಇದೆ ಎನ್ನುವುದರ ಬಗ್ಗೆ ಲೆಕ್ಕವಿದೆಯೋ ? ಭೂ ಶಾಸನದ ಮಸೂದೆಯನ್ನು ಜಾರಿಗೆ ಕೊಟ್ಟಮೇಲೆ ಸರ್‌ಪ್ಲಸ್ ಲ್ಯಾಂಡ್ ಎಷ್ಟು ಉಳಿದಿದ್ದು ಎಂದು ಸರ್ಕಾರಕ್ಕೆ ಲೆಕ್ಕವೇನಾದರೂ ಸಿಕ್ಕಿದೆಯೋ? ಅಂಥ ಸರ್‌ಪ್ಲಸ್ ಲ್ಯಾಂಡ್ ಇಷ್ಟರವರೆಗೆ ಅವೇಲಬಲಿಟಿ ಪಟ್ಟಿಗೆ ಬಂದುಬಿಡಬೇಕಾಗಿತ್ತು. ಈಗ ನಮ್ಮ ನಮ್ಮ ತಾಲ್ಲೂಕುಗಳಲ್ಲಿ ನಾವು ನೋಡಿದರೆ ಬಹಳ ಹೆಚ್ಚು ತೀವ್ರತರವಾದಂಥ ಲ್ಯಾಂಡ್ ರಿಫಾರ್ಮ್ಸ್‌ನ ಪರಿಣಾಮವಾಗಿರತಕ್ಕದ್ದು ನಾವು ಬರತಕ್ಕ ಮಲೆನಾಡು ಪ್ರದೇಶದಲ್ಲಿ ವಿಶೇಷವಾಗಿ ಒಂದು ಎಕರೆ ಭೂಮಿಯೂ ಕೂಡ ಅವೇಲಬಲಿಟಿ ಪಟ್ಟಿಯಲ್ಲಿ ಇಲ್ಲ. ಮಾನ್ಯ ಮಂತ್ರಿಗಳು ಈಗ 75 ಪರ್‌ಸೆಂಟ್ ಹರಿಜನ ಗಿರಿಜನರಿಗೆ ಕೊಡುತ್ತೇವೆಂದು ಇಲ್ಲಿ ಘೋಷಣೆ ಮಾಡಿದರು. ಆ ಭೂಮಿ ಎಷ್ಟು ಇದೆ ಎನ್ನತಕ್ಕ ಲೆಕ್ಕ ಸರ್ಕಾರದಲ್ಲಿ ಏನಾದರೂ ಇದ್ದರೆ ಕೊಡಬೇಕು. 50 ಪರ್ಸೆಂಟ್ ಇದ್ದುದನ್ನು ಈಗ 75 ಪರ್ಸೆಂಟ್ ಮಾಡಿದ್ದೇವೆಂದು ಹೇಳುತ್ತಾರೆ. ಒಂದು ವೇಳೆ ಈ ಭೂಮಿ ಅವಲಯಬಿಲಿಟಿ ಇದ್ದು ಕೊಡುವಂತಹ ಅವಕಾಶವಿದ್ದರೆ ಭೂಮಿ ಕೊಡುವುದರಲ್ಲಿಯೇ ಮಾನ್ಯ ಕಂದಾಯ ಮಂತ್ರಿಗಳಿಗೆ ತೃಪ್ತಿ ಇದ್ದರೆ ನಾನು ಅದಕ್ಕೆ ಏನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಆ ಭೂಮಿ ಉಪಯೋಗಕ್ಕೆ ಬರಬೇಕಾದರೆ, ಉಪಯುಕ್ತವಾಗಬೇಕಾದರೆ ಅವರು ಆ ಭೂಮಿಯ ಮೇಲೆ ಹಾಕತಕ್ಕಂಥ ಬಂಡವಾಳಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ? ಸುಮ್ಮನೆ ಭೂಮಿ ಕೊಡುತ್ತೇವೆಂದು ಹೇಳತಕ್ಕಂಥಾದ್ದು ಇವತ್ತಿನದಲ್ಲ. ನಮಗೆ ಸ್ವಾತಂತ್ರ್ಯ ಬಂದಾಗಿನಿಂದ ನಾನು 1952ನೇ ಇಸವಿಯಿಂದ ಕೇಳುತ್ತಿದ್ದೇನೆ. ಹರಿಜನರಿಗೆ ಭೂಮಿ ಕೊಡುತ್ತೇವೆ, ಗಿರಿಜನರಿಗೆ ಭೂಮಿ ಕೊಡುತ್ತೇವೆ ಎಂದು ಹೇಳಿದ್ದೂ ಹೇಳಿದ್ದೆ. ಎಷ್ಟು ಜನ ಈ ಭೂಮಿಯಿಂದ ಬದುಕಿದ್ದಾರೆ ? ಬದುಕುವುದಕ್ಕೆ ಸರ್ಕಾರ ಏನಾದರೂ ವ್ಯವಸ್ಥೆ ಮಾಡಿದೆಯೇ ? ಇದರ ಮಾಹಿತಿ ಕೊಟ್ಟರೆ ಒಳ್ಳೆಯದು. ಮುಖ್ಯವಾಗಿ ಈ ವಿದ್ಯಾ ಸಂಸ್ಥೆಗಳಿಗೆ ವಿನಾಯಿತಿ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಈಗ ರಾಮಯ್ಯನವರಿಗೆ ಎಷ್ಟು ಯೂನಿಟ್ ಕೊಟ್ಟಿದ್ದೀರಿ ? ಅದೇ ಅರ್ಬನ್ ಲ್ಯಾಂಡ್ ಲಿಮಿಟ್‌ನಲ್ಲಿ ಎಗ್ಸಮ್‌ಷನ್ ಕೊಟ್ಟಿದ್ದೀರಲ್ಲಾ, ಹಾಗೆಯೇ ಇಲ್ಲಿ ಒಂದು ಯೂನಿಟ್ ಎಂದು ಹೇಳುವಾಗ, ಒಂದು ಯೂನಿಟ್‌ಗೆ 54 ಎಕರೆ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇದರ ಪ್ರಕಾರ 5 ಎಕರೆ ಇದೆ. ಅಂದರೆ ಗೌರ್ನಮೆಂಟ್ ಸ್ಕೂಲ್ ಇರಲಿ, ಪ್ರೈವೇಟ್ ಸ್ಕೂಲ್ ಆಗಲಿ ಪರ್ಚೇಸ್ ಮಾಡುವುದಕ್ಕೆ ಅವಕಾಶವಿಲ್ಲ. ಅವರು 5 ಎಕರೆ ವರೆಗೆ ಪರ್ಚೇಸ್ ಮಾಡಿಕೊಂಡು ಸ್ಕೂಲ್ ಬಿಲ್ಡಿಂಗ್ ಕಟ್ಟಿಸುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೇವೆ. ಅದೇ ರೀತಿಯಾಗಿ ಇಂಡಸ್ಟ್ರಿಗೆ a new industrial policy, two units means not more than 10 crores.

ಶ್ರೀ ಡಿ.ಬಿ.ಚಂದ್ರೇಗೌಡ:- ನೀವು ಈ ಯೂನಿಟ್‌ನ್ನು ಡಿಫೈನ್ ಮಾಡಬೇಕಲ್ಲ. ಈ ಎಗ್ಸಾಮ್‌ಷನ್ ದುರುಪಯೋಗವಾಗದ ಹಾಗೆ ನೀವು ಮಾಡಬೇಕು. ಅದಕ್ಕೆ ಸರಿಯಾದ ಮಾಹಿತಿಯನ್ನು ಕೇಳುತ್ತಿರುವ ಉದ್ದೇಶ ನನ್ನದು. ಅದಕ್ಕಾಗಿ ಹರಿಜನರಿಗೆ 75 ಪರ್ಸೆಂಟ್‌ನಷ್ಟು ಮೀಸಲಾತಿ ಕೊಡುತ್ತಿದ್ದೇವೆ. ಹೇಳುವಾಗ ಒಟ್ಟು ಅವೇಲಿಬಿಲಿಟಿ ಲಿಸ್ಟ್‌ನಲ್ಲಿ ಎಷ್ಟು ಭೂಮಿ ಇದೆ? ಭೂ ಶಾಸನ ಮಸೂದೆಯಂತೆ ಎಕ್ಸಸ್ ಆಗಿ ಬಂದಂತಹ ಲ್ಯಾಂಡ್ ಎಷ್ಟು? ಇದುವರೆಗೆ ಡಿಸ್‌ಪೋಸಬಲ್ ಆಗಿರುವಂಥಾದ್ದು ಎಷ್ಟು ? ಮುಂದೆ ಡಿಸ್‌ಪರ್ಸ್‌ಮೆಂಟ್‌ಗೆ ಇರತಕ್ಕಂಥಹ ಭೂಮಿ ಎಷ್ಟು ? ಯಾವ ಯಾವ ಜಿಲ್ಲೆಗಳಲ್ಲಿ ಮತ್ತು ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಭೂಮಿ ಇದೆ ಎನ್ನುವ ಒಂದು ಲೆಕ್ಕ ಕೊಟ್ಟರೆ ಅನುಕೂಲವಾಗುತ್ತದೆ. ಅದು ಇಲ್ಲದೇ ಇದ್ದರೆ, ಬರೀ ಪುಸ್ತಕದಲ್ಲಿ, ಶಾಸನಸಭೆಯಲ್ಲಿ ನಾವು ಹೇಳಿದ ಹಾಗೆ ಆಗುತ್ತದೆ. ನಾನು ತೀರ್ಥಹಳ್ಳಿ ಕ್ಷೇತ್ರದಿಂದ ಬರುತ್ತಿದ್ದೇನೆ. ನೀವು ಹೊಸದಾಗಿ ಅದನ್ನು ಕನ್‌ಫರ್ಮ್ ಮಾಡುತ್ತೇವೆಂದು ಹೇಳಿ ಬಿಟ್ಟುಬಿಡುತ್ತೀರಿ. ನಾನು ಕಂದಾಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ನೀವು ಹೊಸದಾಗಿ ಮಾಡಿದ್ದೀರಲ್ಲ, ಇದನ್ನು ಕನ್‌ಫರ್ಮ್ ಮಾಡುತ್ತೇವೆಂದು ಒಂದು ಸಮಿತಿ ಮಾಡಿದ್ದೀರಿ. ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಸ್ವಾಮಿ ಪ್ರತಿ ಗ್ರಾಮದಲ್ಲಿ ಇಷ್ಟು ನಡೆಯುತ್ತಿದೆ, ನಾವು ಊರಿಗೆ ಹೋದರೆ ಪಂಚಾಯತಿ ಇರುತ್ತದೆ, ಅವನ ಭೂಮಿ ಇವನು ಒತ್ತುಕೊಂಡಿದ್ದಾನೆ, ಇವನ ಭೂಮಿ ಅವನು ಒತ್ತುಕೊಂಡಿದ್ದಾನೆ, ಸರ್ಕಾರದ ಭೂಮಿಯನ್ನು ಒತ್ತುವರಿ ಮಾಡುವುದಕ್ಕೆ ಪೈಪೋಟಿ ನಡೆದಿದೆ. ಪೈಪೋಟಿ, ಹೊಡೆದಾಟ, ಗಲಾಟೆ ಹೀಗೆ ಗ್ರಾಮಗಳಲ್ಲಿ ನಡೆಯುತ್ತಿದೆ. ದಯವಿಟ್ಟು ಇದನ್ನು ಬೇಗ ಮುಗಿಸುವುದಕ್ಕೆ ಏನಾದರೂ ಪ್ರಯತ್ನ ಮಾಡಬೇಕು. ಭೂ ಶಾಸನ ಮಸೂದೆಗೆ ತಿದ್ದುಪಡಿ ತರತಕ್ಕಂಥಾದ್ದು ಒಂದು ಭಾಗವಾದರೆ, ಅವರಿಗೆ ಅದನ್ನು ಕೊಡುತ್ತೇವೆಂದು ಹೇಳಿ, ಇಲ್ಲದಿದ್ದರೆ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿ. ವಿಶೇಷವಾಗಿ ಮಲೆನಾಡಿನಲ್ಲಿ ಮೈನರ್ ಫಾರೆಸ್ಟ್, ಮೇಜರ್ ಫಾರೆಸ್ಟ್, ರಿಸರ್ವ್ಡ್ ಫಾರೆಸ್ಟ್, ಸಿ.ಅಂಡ್.ಡಿ. ಲ್ಯಾಂಡ್, ರೆವಿನ್ಯೂ ಲ್ಯಾಂಡ್ ಹೀಗೆ ಹಲವು ಹತ್ತು ಕ್ಲಾರಿಫಿಕೇಷನ್ಸ್ ಇವೆ. ಇದರಲ್ಲಿ ಯಾವ ಭೂಮಿಯನ್ನು ಒತ್ತುವರಿ ಮಾಡಿದರೆ ಅವರು ಕೊಡುತ್ತಾರೆ ಎನ್ನುವುದು ಇಲ್ಲ. ಈಗಲೂ ಹಾಗೆಯೇ, ಎಕ್ಸಸ್ ಲ್ಯಾಂಡ್ ಕೊಡುತ್ತೇವೆಂದು ಹೇಳಿ, ತುಟಿಗೆ ತುಪ್ಪ ಹಚ್ಚತಕ್ಕಂತಹ ಕೆಲಸ ಮಾಡುವುದು ಬೇಡ. ನಿಖರವಾದಂತಹ ಮಾಹಿತಿಯನ್ನು ನಾವು ಒದಗಿಸಿಕೊಡಬೇಕು. ಮತ್ತೆ ಈ ಬಗರ್ ಹುಕುಂ ಸಾಗುವಳಿ ಕನ್‌ಫರ್‌ಮೇಷನ್ ಇದೆಯಲ್ಲ ಇದಕ್ಕೆ ಒಂದು ಕಾಲಮಿತಿಯನ್ನು ಹಾಕಿ ದಯವಿಟ್ಟು ಇವರನ್ನು ಈ ಹಿಂಸೆಯಿಂದ ತಪ್ಪಿಸಿ ಬಿಡಿ. ಎಷ್ಟು ಹಿಂಸೆ ಆಗುತ್ತಿದೆಯೆಂದರೆ, ನಿನ್ನೆ ನಾನು ಊರಿಗೆ ಹೋದರೆ 10 ಪಂಚಾಯಿತಿ ಮಾಡಬೇಕಾಯಿತು. ಅವನ ಭೂಮಿ ಇವನು ಒತ್ತುವರಿ ಮಾಡಿಕೊಂಡಿದ್ದಾನೆ ಎಂದು ವ್ಯಾಜ್ಯ, ಹೊಡೆದಾಟ, ದೊಂಬಿ ಹಳ್ಳಿಯಲ್ಲಿ ಇದೆ. ಪಂಚಾಯಿತಿ ಮಾಡತಕ್ಕಂತಹ ಕೆಲಸ ಬಹುತೇಕ ಗ್ರಾಮೀಣ ಪ್ರದೇಶದಿಂದ ಬಂದಿರತಕ್ಕಂತಹ ಶಾಸಕರಿಗೆ ಅದರ ಅನುಭವವಾಗಿರುತ್ತದೆ. ಇದನ್ನು ಕೂಡ ಯಾವಾಗ ಮುಗಿಸುತ್ತೀರೆಂದು ತಿಳಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ: (ಶಿಕಾರಿಪುರ):- ಸನ್ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ಭೂಸುಧಾರಣೆ ವಿಧೇಯಕ 1992ಕ್ಕೆ ಒಂದು ತಿದ್ದುಪಡಿಯನ್ನು ತರತಕ್ಕಂತಹ ಸಂದರ್ಭದಲ್ಲಿ, ಅದರ ಉದ್ದೇಶಗಳು ಮತ್ತು ಕಾರಣಗಳನ್ನು ಹೇಳುವಂತಹ ಸಂದರ್ಭದಲ್ಲಿ ಹೆಚ್ಚುವರಿ ಭೂಮಿ ವಿಲೇವಾರಿಯಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟಿನವರಿಗೆ ಕೊಡುವುದಕ್ಕೆ 50 ಪರ್ಸೆಂಟ್ ಸಾಲುವುದಿಲ್ಲವೆಂದು ಅದನ್ನು 75 ಪರ್ಸೆಂಟ್‌ಗೆ ಹೆಚ್ಚಿಸುವುದಕ್ಕೋಸ್ಕರ ಪ್ರಸ್ತಾಪ ಮಾಡಿದ್ದೀರಿ. ಇವತ್ತು ಪ್ರಶ್ನೆ ಇರುವಂಥಾದ್ದು ಏನೆಂದರೆ ಈಹಿಂದೆ ಶಾಸನದ ಒಳಗಡೆ ಅನುಕೂಲ ಅವಕಾಶಗಳು ಏನು ಇತ್ತು ಅಂದರೆ ಹೆಚ್ಚುವರಿ ಭೂಮಿಯನ್ನು 50 ಪರ್ಸೆಂಟ್ ಹಂಚುವಂತಹ ಅವಕಾಶವಿದ್ದಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಎಷ್ಟು ಜಮೀನನ್ನು ತಾವು ಹಂಚಿದ್ದೀರಿ ಯಾವಾಗ ಈ ಪ್ರಶ್ನೆ ಉದ್ಭವ ಆಗುತ್ತದೆ ಎಂದರೆ, ಇದನ್ನು ಶೇಕಡ 75 ಕ್ಕೆ ಏರಿಕೆ ಮಾಡಿರುವುದಕ್ಕೆ ನಮಗೆ ಸಂಪೂರ್ಣ ಸ್ವಾಗತ ಇದೆ. ಅದರ ಬಗ್ಗೆ ನನ್ನದೇನೂ ಅಭ್ಯಂತರವಿಲ್ಲ. ಆದರೆ, ಕಳೆದ ಅನೇಕ ವರ್ಷಗಳಿಂದ ಹೆಚ್ಚುವರಿ ಭೂಮಿಯನ್ನು ಶೇಕಡ 50 ರಷ್ಟು ಹಂಚುವಂತಹ ಅವಕಾಶಗಳು ಸಿಕ್ಕಿದಾಗ, ಈ ಕಾನೂನು ಅನ್ವಯ ಈ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಕ್ಕೆ ಈ ಜಮೀನನ್ನು ಹಂಚುವಂಥ ಯಾವುದೇ ಪ್ರಾಮಾಣಿಕ ಪ್ರಯತ್ನ ನಡೆದಿಲ್ಲ. ಇದರಿಂದ ಇವತ್ತು ಶೇಕಡ 50 ರಿಂದ 75ಕ್ಕೆ ಏರಿಸಿಕೊಳ್ಳುವಂಥ ದೃಷ್ಟಿಯಿಂದ ಸಹ ಇದು ಪ್ರಚಾರಕ್ಕೆ ಅನುಕೂಲ ಆಗಬಹುದೇ ಹೊರತು, ಮತ್ತೇನೂ ಆಗುವುದಿಲ್ಲ. ಈಗಲಾದರೂ ಇದನ್ನು ಏರಿಕೆ ಮಾಡಿ ಕೊಂಡಮೇಲಾದರೂ ಸಹ ಪ್ರಾಮಾಣಿಕವಾಗಿ ಒಂದು ನಿಗಧಿಯಾದಂತಹ ವೇಳೆಯೊಳಗಾಗಿ ಈ ಜಮೀನನ್ನು ಹಂಚುವಂಥ ಕೆಲಸವನ್ನು ಮಾಡದೇ ಇದ್ದರೆ ಕೊನೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಜಮೀನು ಹಂಚುವುದಕ್ಕೆ ಯಾವುದೂ ಉಳಿಯುವುದಿಲ್ಲ. ಕಳೆದ 4-5 ವರ್ಷಗಳಿಂದ ಯಾವ ಅನ್‌ಆಥರೈಸ್ಡ್ ಕಲ್ಟಿವೇಷನ್ ಮಾಡುತ್ತಿದ್ದಾರೆ ಅದನ್ನು ಕನ್‌ಫರ್ಮ್ ಮಾಡಬೇಕು ಎನ್ನುವುದಾಗಲಿ, ಹೆಚ್ಚುವರಿ ಭೂಮಿಯನ್ನು ಹಂಚಬೇಕೆಂಬ ಪ್ರಶ್ನೆ ಬಂದಾಗ ಇದೂವರೆಗೂ ಕೂಡ ಇದನ್ನು ಕಾರ್ಯರೂಪಕ್ಕೆ ತರುವ ಯಾವುದೇ ಪ್ರಾಮಾಣಿಕ ಪ್ರಯತ್ನ ಸರ್ಕಾರದ ಕಡೆಯಿಂದ ಆಗಿಲ್ಲ. ಅದಕ್ಕೋಸ್ಕರ, ಈಗ ಏನೋ ಒಂದು ತಿದ್ದುಪಡಿಯನ್ನು ತಂದು ಹೆಚ್ಚುವರಿ ಭೂಮಿಯನ್ನು ಶೇಕಡ 50 ರಿಂದ 75ಕ್ಕೆ ಹಂಚುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಾ, ಈಗಲಾದರೂ, ಬರುವ 6-7 ತಿಂಗಳು ಎಂದು ಒಂದು ನಿಗದಿ ಮಾಡಿಕೊಂಡು ಅಷ್ಟರೊಳಗೆ ಈ ಜಮೀನನ್ನು ಹಂಚುವಂಥ ಕೆಲಸವನ್ನು ಪೂರ್ಣ ಮಾಡುತ್ತೇವೆ ಎನ್ನುವಂಥ ದಿಕ್ಕಿನಲ್ಲಿ ಕಾರ್ಯಕ್ರಮ ರೂಪಿಸಿದಾಗ ಮಾತ್ರ ಈ ತಿದ್ದುಪಡಿ ತಂದಿದ್ದಕ್ಕೆ ಸಾರ್ಥಕವಾಗುತ್ತದೆ. ಆ ದಿಕ್ಕಿನಲ್ಲಿ ಸರ್ಕಾರ ಏನು ಹೇಳುತ್ತದೆ, ವಿಶೇಷ ಪ್ರಯತ್ನ , ಆಸಕ್ತಿ ಹೊಂದಿ ಆ ಕೆಲಸವನ್ನು ಪೂರ್ಣ ಮಾಡುತ್ತೀರಾ ಎನ್ನುವಂಥಾದ್ದು ಬಹಳ ಮುಖ್ಯವಾದ ಸಂಗತಿ. ಇದರಿಂದ ಅನೇಕ ತಿದ್ದುಪಡಿಗಳು ಕೇವಲ ತೋರುಗಾಣಿಕೆಗೋಸ್ಕರ, ಪ್ರಚಾರಕ್ಕೋಸ್ಕರ ಆಗುತ್ತಿದೆಯೇ ಹೊರತು ಆ ಒಂದು ಉದ್ದೇಶ ಸಫಲ ಆಗುತ್ತಾ ಇಲ್ಲ. ಇನ್ನು ಎರಡನೆಯದು, ಈ ಎರಡನೆ ತಿದ್ದುಪಡಿ ಏನೆಂದರೆ ;

"ಸದರಿ ಅಧಿನಿಯಮದ 109ನೇ ಪ್ರಕರಣವು ಸರ್ಕಾರಕ್ಕೆ 80ನೇ ಪ್ರಕರಣದ ಉಪಬಂಧಗಳಿಂದ ಮಾತ್ರ ಭೂಮಿಯನ್ನು ವಿನಾಯಿತಿಗೊಳಿಸಲು ಅಧಿಕಾರ ನೀಡುವುದರಿಂದ ಕೈಗಾರಿಕಾ ಅಭಿವೃದ್ಧಿಯ ಪ್ರವರ್ಧನೆಯ ಸಲುವಾಗಿ ಮತ್ತು ಶಿಕ್ಷಣ ಸಂಸ್ಥೆಗಳು ಭೂಮಿಯನ್ನು ಬೇಸಾಯೇತರ ಉದ್ದೇಶಗಳಿಗಾಗಿ ಧಾರಣ ಮಾಡುವುದನ್ನು ಸಾಧ್ಯಗೊಳಿಸಲು ಯಾವುದೇ

ಭೂಮಿಯನ್ನು 79ಕ್ಕೆ ಅಡ್ಡವಾ 79ಎ ಪ್ರಕರಣ ಉಪಬಂಧಗಳಿಂದಲೂ ಸಹ ವಿನಾಯಿತಿಗೊಳಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ."

ಎಂದು ಹೇಳಿ ಈ ಒಂದು ವಿನಾಯಿತಿ ಶಾಲಾ ಅಭಿವೃದ್ಧಿಗೋಸ್ಕರ, ಶಿಕ್ಷಣ ಸಂಸ್ಥೆಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಒಂದು ಯೂನಿಟ್, ಮತ್ತೆ ಕೈಗಾರಿಕೆಗಳಿಗೆ ಎರಡು ಯೂನಿಟ್ ಕೊಡುತ್ತೇವೆ ಎನ್ನುವಂಥ ಮಾತನ್ನು ತಾವು ಹೇಳುತ್ತಿದ್ದೀರಿ. ಸನ್ಮಾನ್ಯ ಅಧ್ಯಕ್ಷರೇ, ನಿಶ್ಚಿತವಾಗಿ ಈ ಕೈಗಾರಿಕೋದ್ಯಮಿಗಳಿಗೆ ಮತ್ತು ಈ ರೀತಿ ಮುಂದೆ ಬರುವಂಥವರಿಗೆ, ಯಾರಿಗೆ ಇನ್‌ಫ್ಲೂ ್ಲಯೆನ್ಸ್ ಇದೆ, ದೊಡ್ಡ ದೊಡ್ಡವರು ಇದ್ದಾರೆ, ಅವರು ಜಮೀನನ್ನು ಕಬಳಿಸುವುದಕ್ಕೆ ಇದರಿಂದ ಅನುಕೂಲ ಆಗಬಹುದೇ ಹೊರತು ಇದರಿಂದ ಏನು ಉಪಯೋಗ ಆಗುವುದಿಲ್ಲ. ದೊಡ್ಡವರಿಗೆ ಇದರಿಂದ ಸಹಾಯ ಆಗುತ್ತದೆಯೇ ಹೊರತು, ಬಡವರಿಗೆ ಇದರಿಂದ ಸಹಾಯ ಆಗುವುದಿಲ್ಲ. ಏಕೆಂದರೆ ಒಬ್ಬ ಸಾಮಾನ್ಯ ವ್ಯಕ್ತಿಗೆ, ಅನ್‌ಎಂಪ್ಲಾಯ್ಡ್ ಗ್ರಾಜುಯೇಟ್ಸ್‌ಗೆ ಇದರಲ್ಲಿ ಪ್ರಾವಿಜನ್ ಮಾಡಿಕೊಳ್ಳುತ್ತೇವೆ ಎಂದರೆ ನನಗೆ ಅರ್ಥವಾಗುತ್ತಿತ್ತು. ನೀವು ಕೈಗಾರಿಕೋದ್ಯಮಿಗಳು ಎಂದು ಹೇಳಿದ ತಕ್ಷಣ ಯಾರಿಗೆ ಇನ್‌ಫ್ಲೂ ್ಲಯನ್ಸ್ ಇದೆ, ಲಕ್ಷಗಟ್ಟಲೆ ಖರ್ಚುಮಾಡತಕ್ಕಂಥ ಶಕ್ತಿ ಇದೆ, ಅವನಿಗೆ ಇದರಿಂದ ಉಪಯೋಗ ಆಗಬಹುದೇ ಹೊರತು, ಸಾಮಾನ್ಯವಾಗಿ ಸಣ್ಣಪುಟ್ಟ ಕಾರ್ಖಾನೆ ಮಾಡಬೇಕು ಎನ್ನುವಂಥ ವ್ಯಕ್ತಿಗೆ ಇದರಿಂದ ಉಪಯೋಗ ಆಗುವುದಿಲ್ಲ. ಈಗಾಗಲೇ ಶಿಕ್ಷಣ ಸಂಸ್ಥೆಗಳು ನಮ್ಮ ರಾಜ್ಯದಲ್ಲಿ ಎಷ್ಟು ಹುಟ್ಟಿಕೊಂಡಿವೆ?. ಒಂದು ರೀತಿ ಕೆಲವನ್ನು ಬಿಟ್ಟರೆ, ಉಳಿದಂತಹವು ನಾಯಿ ಕೊಡೆಯಂತೆ ಬೆಳೆಯುತ್ತಿವೆ. ಕೇವಲ ಸ್ವಾರ್ಥಕ್ಕೋಸ್ಕರ, ದುಡ್ಡು ಮಾಡುವುದಕ್ಕೋಸ್ಕರ, ಶೋಷಣೆ ಮಾಡುವುದಕ್ಕೋಸ್ಕರ ಈ ವಿದ್ಯಾ ಸಂಸ್ಥೆಗಳು ಪ್ರಾರಂಭ ಆಗುತ್ತಿವೆ. ಇದು ಎಲ್ಲರಿಗೂ ಗೊತ್ತಿರುವ ಸಂಗತಿ. ಇಂಥ ಒಂದು , ಸಂದರ್ಭದಲ್ಲಿ ಅವರಿಗೂ ಸಹ ಈ ಒಂದು ವಿನಾಯಿತಿ ಕೊಡುವಂಥ ಪ್ರಯತ್ನ ಮಾಡಿದರೆ, ಮತ್ತೆ ಈ ರೀತಿ ವ್ಯಾಪಾರಿ ಸಂಸ್ಥೆಗಳು ಜಾಸ್ತಿಯಾಗುವುದಕ್ಕೆ, ಮತ್ತೆ ಈ ಕ್ಷೇತ್ರದಲ್ಲಿ ಈಗಾಗಲೇ ಇರುವಂಥವರು ಬೇರೆ ಬೇರೆ ಕಡೆ ಜಮೀನುಗಳನ್ನು ತೆಗೆದುಕೊಂಡು ದುರುಪಯೋಗ ಮಾಡಿಕೊಂಡು ಅವರದೇ ಆದಂತಹ ಸಂಸ್ಥಾನಗಳನ್ನು ಮಾಡಿಕೊಳ್ಳುವುದಕ್ಕೆ ಉಪಯೋಗವಾಗುತ್ತದೆಯೇ ಹೊರತು ಬೇರೆ ಏನೂ ಇಲ್ಲ. ಬಹುಶ: ಇದರಿಂದ ಏನು ಆಗಬಹುದು ಎಂದರೆ, ಮುಂದೆ ಬರತಕ್ಕ ವರ್ಷಗಳಲ್ಲಿ, 4-6 ವರ್ಷಗಳಲ್ಲಿ ಈ ರಾಜ್ಯದಲ್ಲಿ ತಾವು ಯಾವುದಾದರೊಂದು ಉತ್ತಮವಾದಂತಹ ಕೆಲಸ ಮಾಡಬೇಕು, ಅದಕ್ಕೆ ಜಾಗಬೇಕು ಎಂದರೆ ಒಂದು ಗುಂಟೆ ಜಾಗ ಕೂಡ ಒಂದು ಅಭಿವೃದ್ಧಿ ಕಾರ್ಯಕ್ಕೋಸ್ಕರ ಸಿಕ್ಕದೇ ಇರುವಂಥ ಪರಿಸ್ಥಿತಿ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ತಪ್ಪು ತಿಳಿದುಕೊಂಡಿದ್ದೀರಿ, ಇದನ್ನು ಎಜುಕೇಷನಲ್ ಸೊಸೈಟಿಗಾಗಲಿ, ಯಾರೇ ಒಂದು ಸ್ಕೂಲ್‌ನ್ನು ನಿಮ್ಮ ಊರಿನಲ್ಲಿ ಮಾಡಬೇಕು ಅಂದರೆ ಪರ್‌ಚೇಸ್ ಮಾಡುವುದಕ್ಕೆ ನಿಮಗೆ ಬರುವುದಿಲ್ಲ. ಏಕೆಂದರೆ, ಇನ್‌ಕಮ್ ಲಿಮಿಟ್ ಇರುತ್ತದೆ. ಹೋದಸಲ ತಾವೇ ಸಜೆಸ್ಟ್ ಮಾಡಿದ್ದಿರಿ, ತಾವು ಸಜೆಸ್ಟ್ ಮಾಡಿದ ಮೇಲೆ ನಾವು ಇದನ್ನು ಸರಿಯೆಂದು ತಿಳಿದುಕೊಂಡು ತಂದರೆ, ಇವತ್ತು ಇದನ್ನು ನಾವು ಬೇರೆಯವರಿಗೆ ಸಹಾಯ ಮಾಡುವುದಕ್ಕೆ ತಂದಿದ್ದೇವೆ ಎನ್ನತಕ್ಕಂಥಾದ್ದಲ್ಲ. ಇದು ಸರ್ಕಾರಿ ಭೂಮಿ ಕೊಡತಕ್ಕಂಥಾದ್ದಲ್ಲ. ಈ ಅಗ್ರಿಕಲ್ಚರ್ ಲ್ಯಾಂಡ್ ಅನ್ನು ನೇರವಾಗಿ ಪರ್‌ಚೇಸ್ ಮಾಡುವುದಕ್ಕೆ ಅವರಿಗೆ ಅವಕಾಶ ಇರಲಿಲ್ಲ. ಈಗ ಆಟ್‌ಲೀಸ್ಟ್ 5 ಎಕರೆ, ಒಂದು ಯೂನಿಟ್ ಪರ್‌ಚೇಸ್ ಮಾಡತಕ್ಕಂಥ ಅವಕಾಶವನ್ನು ಈ ಕಾನೂನಿನಲ್ಲಿ ಎಕ್ಸಮ್‌ಷನ್ ಎಂದು ಕೊಟ್ಟಿದ್ದೇವೆ ಅಷ್ಟೆ. ಬಾಕಿ ಯಾವ

ದೃಷ್ಟಿಯಿಂದಲೂ ಕೂಡ ಇಲ್ಲ.

(4.50. ಪಿ. ಎಂ.)

ಶ್ರೀ ಬಿ. ಎಸ್. ಯಡಿಯೂರಪ್ಪ:- ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಇನ್ನೂ 50 ವರ್ಷಗಳಿಗೆ ಆಗುವಷ್ಟು ವಿದ್ಯಾ ಸಂಸ್ಥೆಗಳು ಬೆಳೆದು ನಿಂತಿವೆ. ಈ ಸಂಸ್ಥೆಗಳಿಗೇನೂ ಕೊರತೆಯಿಲ್ಲ. ಈಗ ನೀವು ಒಂದು ಸಾರಿ ಪ್ರಾವಿಷನ್ ಮಾಡುವುದರಿಂದ ಮುಂದೆ ಬಹಳ ಕಷ್ಟವಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಎಲ್ಲಿ ಸರ್ಕಾರಿ ಹೈಸ್ಕೂಲು ಇತ್ತೋ ಅಲ್ಲಿ ಸುತ್ತಮುತ್ತ 3-4 ಖಾಸಗಿ ಹೈಸ್ಕೂಲುಗಳು ಬರುವುದಕ್ಕೆ ದಾರಿಯಾಯಿತು. ಸರ್ಕಾರಿ ಹೈಸ್ಕೂಲ್‌ನವರು ಖಾಸಗಿ ಹೈಸ್ಕೂಲುಗಳಿಗೆ ಬಂದರು, ಅದೇ ರೀತಿ ಇಲ್ಲಿದ್ದವರು ಅಲ್ಲಿಗೆ ಹೋದರು. ಅವರಿಗೆ ಅನುಕೂಲಗಳನ್ನು ಕೊಡುವುದಕ್ಕೆ ಆಗಲಿಲ್ಲ. ಆ ವಿದ್ಯಾಸಂಸ್ಥೆಗಳು ಸರಿಯಾದ ರೀತಿ ನಡೆಯುತ್ತಾ ಇಲ್ಲ. ಈ ಪರಿಸ್ಥಿತಿ ಇರುವಂತಹ ಸಂದರ್ಭದಲ್ಲಿ ನೀವು ಈ ರೀತಿ ಅವರು 5 ಎಕರೆ ಜಮೀನನ್ನು ಕೊಂಡು ಕೊಂಡು ವಿದ್ಯಾ ಸಂಸ್ಥೆಗಳನ್ನು ಕಟ್ಟುವುದಕ್ಕೆ ಗ್ರೀನ್ ಚಿಟ್‌ನ್ನು ಕೊಡುವುದಕ್ಕೆ ನೀವು ಪ್ರಾರಂಭ ಮಾಡಿದರೆ ಮತ್ತೆ ಪ್ರತಿಯೊಂದು ಹಳ್ಳಿಗಳಲ್ಲೂ ಈ ವಿದ್ಯಾ ಸಂಸ್ಥೆಗಳು ಹುಟ್ಟಿಕೊಳ್ಳುತ್ತವೆ. ಅನಗತ್ಯವಾಗಿ ಅವರು ಇದನ್ನು ವ್ಯಾಪಾರಿ ಸಂಸ್ಥೆಗಳನ್ನಾಗಿ ಪರಿವರ್ತನೆ ಮಾಡಿಕೊಳ್ಳುವುದಕ್ಕೆ ಮತ್ತು ಈ ಹೆಸರಿನಲ್ಲಿ ಎಲ್ಲೋ ಒಂದು ಪ್ರೈಮರಿ ಶಾಲೆ ಕಟ್ಟುವುದಕ್ಕೆ 5 ಎಕರೆಯನ್ನು ತೆಗೆದುಕೊಳ್ಳುವುದಕ್ಕೆ ನೀವು ಅವಕಾಶವನ್ನು ಮಾಡಿಕೊಡುತ್ತಿದ್ದೀರಿ. ಇದರಿಂದಾಗಿ ಅವರು ದುರುಪಯೋಗ ಮಾಡಿಕೊಳ್ಳುವುದಕ್ಕೆ ನೀವು ಅವಕಾಶವನ್ನು ಮಾಡಿಕೊಟ್ಟಂತೆ ಆಗುತ್ತದೆ. ಆದರೆ ಅವತ್ತಿನ ದಿವಸ ಈ ವಿಚಾರ ಚರ್ಚೆಗೆ ಬಂದಾಗ ಇದ್ದಂಥ ಸಂದರ್ಭಕ್ಕೂ ಇವತ್ತಿನ ದಿವಸ ನೀವು ಮಾಡಿರುವುದಕ್ಕೆ ಹೊರಟಿರತಕ್ಕ ಸಂದರ್ಭಕ್ಕೂ ಹೋಲಿಕೆ ಮಾಡಿದರೆ ಬಹಳಷ್ಟು ವ್ಯತ್ಯಾಸ ಇದೆ. ನಮ್ಮ ಅನುಭವದಿಂದ ಹೇಳುವುದಾದರೆ, ಇತ್ತೀಚೆಗೆ ಹುಟ್ಟಿಕೊಳ್ಳುತ್ತಿರುವ ವಿದ್ಯಾ ಸಂಸ್ಥೆಗಳು ಕೇವಲ ವ್ಯಾಪಾರಿ ಸಂಸ್ಥೆಗಳಾಗುತ್ತಿವೆ. ಅವರಿಗೆ ನಾವು ಯಾವುದೇ ಅನುಕೂಲಗಳನ್ನೂ ಮಾಡಿಕೊಡುವುದಕ್ಕಾಗುವುದಿಲ್ಲ.

ಇನ್ನು ಎರಡನೆಯದಾಗಿ ಹೇಳುವುದಾದರೆ, ಕೈಗಾರಿಕೆಗಳ ವಿಚಾರ. ಇವತ್ತು ಒಬ್ಬ ಸಾಮಾನ್ಯ ನಿರುದ್ಯೋಗಿ ಯುವಕ ಇಂಥ ಸಂದರ್ಭದಲ್ಲಿ ಕೈಗಾರಿಕೆಯನ್ನು ಮಾಡಿ ಮುಂದೆ ಬಂದಿದ್ದಾನೆ. ಅವನಿಗೆ ಅನುಕೂಲವಾಗಿದೆ ಎನ್ನತಕ್ಕ ಒಂದೇ ಒಂದು ಉದಾಹರಣೆ ಯಾವುದಾದರೂ ಇದ್ದರೆ ದಯವಿಟ್ಟು ತಾವು ಕೊಡುತ್ತೀರಾ ? ಕೈಗಾರಿಕೆಗಳಿಗೆ 2 ಯೂನಿಟ್‌ಗೆ 10 ಎಕರೆಗಳನ್ನು ತೆಗೆದುಕೊಳ್ಳುವುದಕ್ಕೆ ನೀವು ಅವಕಾಶವನ್ನು ಮಾಡಿಕೊಟ್ಟರೆ ಇದರಿಂದ ಇನ್‌ಫ್ರಾ ಸ್ಟ್ರಕ್ಚರ್ಸ್ ಇರತಕ್ಕವರು ಯಾವುದಕ್ಕೂ ಹಣವನ್ನೇ ಕೊಡದೆ, ಕನ್ವರ್ಷನ್ ಫೀಸನ್ನೂ ಕಟ್ಟದೇ ಇರುವುದಕ್ಕೆ ಇದು ಅವಕಾಶವಾಗಬಹುದೇ ಹೊರತು ಸಣ್ಣ ಕೈಗಾರಿಕೋದ್ಯಮಿಗೆ ಯಾವುದೇ ಉಪಯೋಗವಾಗುವುದಿಲ್ಲ. ತಾವು ಒಂದು ಕಂಡೀಷನ್ ಹಾಕಿ. ಇದನ್ನು ನಿರುದ್ಯೋಗಿ ಪದವೀಧರರಿಗೆ ಮಾತ್ರ ಉಪಯೋಗ ಮಾಡುತ್ತೇವೆ, ಅವರ ಪೈಕಿ ಕೈಗಾರಿಕೆಯನ್ನು ಮಾಡುತ್ತೇವೆಂದು ಮುಂದೆ ಬರುವವರಿಗೆ ಮಾತ್ರ ಇದನ್ನು ಕೊಡುತ್ತೇವೆ, ಗ್ರಾಮಾಂತರ ಪ್ರದೇಶದಿಂದ, ಬಡವರ ಮನೆಯಿಂದ ಬರತಕ್ಕವರಿಗೆ ಮಾತ್ರ ಇದರಲ್ಲಿ ಪ್ರಾವಿಷನ್ ಮಾಡುತ್ತೇವೆಂದು ನಿಬಂಧನೆಯನ್ನು ಹಾಕಿದರೆ ಮಾತ್ರ ಉಪಯೋಗ ಆಗಬಹುದೇ ಹೊರತು, ಇಲ್ಲದಿದ್ದರೆ ಇದು ಇದ್ದವರಿಗೆ ಮತ್ತು ಯಾರೋ ಕೆಲವರಿಗೆ ಹೊಟ್ಟೆ ತುಂಬಿಸುವುದಕ್ಕೆ ನೀವು ಇವತ್ತು ಅವಕಾಶವನ್ನು ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಈ ಎರಡನೇ ವಿಚಾರದ ಬಗ್ಗೆ ನನ್ನ ಸಂಪೂರ್ಣ ವಿರೋಧ ಇದೆ. 50 ಪರ್ಸೆಂಟ್ ಇರುವುದನ್ನು 75 ಪರ್ಸೆಂಟ್‌ಗೆ ಏರಿಸಿ ಆ ಜಮೀನನ್ನು ಎಸ್.ಸಿ, ಎಸ್.ಟಿ,ಗಳಿಗೆ ಕೊಡುವ ಬಗ್ಗೆ

ನನ್ನ ಸಂಪೂರ್ಣ ಸ್ವಾಗತ ಇದೆ. ಆದರೆ ಎರಡನೇ ತಿದ್ದುಪಡಿಯನ್ನು ಎಂದರೆ ಕೈಗಾರಿಕಾಭಿವೃದ್ಧಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಡುವುದಕ್ಕೆ ಏನು ತಿದ್ದುಪಡಿಯನ್ನು ತಂದಿದ್ದೀರಿ ಇದನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕು ; ಇದನ್ನು ಕೈ ಬಿಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

+ ಶ್ರೀ ಶಿವಾನಂದ . ಹೆಚ್. ಕೌಜಲಗಿ: (ಬೈಲಹೊಂಗಲ):- ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ತಂದಿರತಕ್ಕ ತಿದ್ದುಪಡಿಗೆ ನಾನು ಕೆಲವು ಸೂಚನೆಗಳನ್ನು ಕೊಡಬಯಸುತ್ತೇವೆ. ಈಗಾಗಲೇ ಟ್ರಿಬ್ಯುನಲ್ ಆಗಿರತಕ್ಕ ಆರ್ಡರನ್ನು ಮತ್ತೆ ರಿವ್ಯೂ ಮಾಡತಕ್ಕ ಸೆಕ್ಷನ್ 122 (ಎ) ಏನು ಮಾಡಿದ್ದೀರಿ ಇದು ನಿಜವಾಗಿಯೂ ಸರಿಯಲ್ಲ. ಇದನ್ನು ಮಾಡುವುದರಿಂದ ಮತ್ತೆ ಕರಪ್ಷನ್‌ಗೆ ಅವಕಾಶವನ್ನು ಮಾಡಿಕೊಟ್ಟಂತಾಗುತ್ತದೆ. 1984ನೇ ಇಸವಿಯಲ್ಲಿ ನಾವು ಏನು ಮಾಡಿದ್ದೆವು ಅದನ್ನು ಮುಗಿಸಿ ನಂತರ 1992ನೇ ಇಸವಿಯಲ್ಲಿ ಎಕ್ಸ್‌ಟೆನ್‌ಷನ್ ಮಾಡಿದರೆ ಮತ್ತೆ ಬೇನಾಮಿ ಅಪ್ಲಿಕೇಷನ್ಸ್ ಕೊಡುತ್ತಾರೆ, ರೆವಿನ್ಯೂ ಅಧಿಕಾರಿಗಳು ಅದಕ್ಕೆ ಒಂದು ನೋಟೀಸ್ ಕೊಟ್ಟು ಹೆದರಿಸುವುದಕ್ಕೆ ಶುರು ಮಾಡುತ್ತಾರೆ. ಆದುದರಿಂದ ಇದನ್ನು ಮಾಡತಕ್ಕದ್ದು ಖಂಡಿತ ಸರಿಯಲ್ಲ.

ಇವತ್ತು ಲ್ಯಾಂಡ್ ರಿಫಾರಮ್ ಆಕ್ಟ್ ಕೆಳಗೆ ಈ ಇಸವಿಯೊಳಗೆ ಈ ಕೆಲಸವನ್ನು ಮುಗಿಸಬೇಕೆಂಬ ಉದ್ದೇಶ ಇತ್ತು. 1984ನೇ ಇಸವಿಯೊಳಗೆ ಯಾವುದು ಮುಗಿದಿದೆ ಅದನ್ನು ಮತ್ತೆ 1990ನೇ ಇಸವಿಯೊಳಗೆ ರಿವ್ಯೂ ಮಾಡುವುದಕ್ಕೋಸ್ಕರ ತಾವು ಏನು ಮಾಡುತ್ತಿದ್ದೀರಿ ಇದು ನಿಜವಾಗಿ ಯೋಗ್ಯವಾದುದಲ್ಲ. ಇದರಿಂದ ಮತ್ತೆ ಕರಪ್ಷನ್ ಜಾಸ್ತಿಯಾಗುತ್ತದೆ, ಅನ್ಯಾಯವಾಗುತ್ತದೆ, ಪೊಲಿಟಿಕಲ್ ಮೋಟಿವ್ ಸ್ಟಾರ್ಟ್ ಆಗುತ್ತದೆ. ಆದುದರಿಂದ ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ತಾವು ಎಜುಕೇಷನ್ ಸಲುವಾಗಿ ಏನು ತಿದ್ದುಪಡಿ ತಂದಿದ್ದೀರಿ, ಅದು ಯೋಗ್ಯವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಮಗೆ ಇದು ಯೋಗ್ಯವಿದೆ. ಸೀಲಿಂಗ್ ತಂದಿದ್ದು, ರಿಲೀಫ್ ಮಾಡತಕ್ಕುದ್ದು ಸರಿಯಲ್ಲ. ಅವರಿಗೆ ಅದು ಸರಿಯಿಲ್ಲ.

ಶ್ರೀ ಶಿವಾನಂದ. ಹೆಚ್. ಕೌಜಲಗಿ:- ಈಗಾಗಲೇ ಮುಗಿದು ಹೊದುದನ್ನುತಾವು ಮತ್ತೆ ರಿವ್ಯೂ ಮಾಡುತ್ತಿದ್ದೀರಿ. ಇದರಿಂದಾಗಿ ಒಬ್ಬರು ಒಂದು ಅರ್ಜಿಯನ್ನು ಕೊಡುತ್ತಾರೆ, ಹಾಗೆ ಕೊಟ್ಟಿದ್ದು ಯೋಗ್ಯವಾಗಿಲ್ಲ ಎಂದು ಹೇಳಿದ ಕೂಡಲೇ ಪೊಲಿಟಿಕಲ್ ಮೋಟಿವ್‌ನಿಂದ ಇವು ಸ್ಟಾರ್ಟ್ ಆಗುತ್ತದೆ. ಈ ರೀತಿ ಪೊಲಿಟಿಕಲ್ ಮೋಟಿವ್‌ನಿಂದ ಸ್ಟಾರ್ಟ್ ಆಗುವುದರಿಂದ ಮತ್ತೆ ಅನ್ಯಾಯಕ್ಕೆ ಅಸ್ಪದ ಕೊಟ್ಟಂತಾಗುತ್ತದೆ, ಇದರಿಂದ ಕರಪ್ಷನ್ ಜಾಸ್ತಿಯಾಗುತ್ತದೆ. ಆದ್ದರಿಂದ ಇದನ್ನು ತಾವು ವಾಪಸ್ಸು ತೆಗೆದುಕೊಳ್ಳಬೇಕು. ವಿದ್ಯಾ ಸಂಸ್ಥೆಗಳ ಸಲುವಾಗಿ ನಾನು ಏತಕ್ಕೆ ಹೇಳಿದೆ ಎಂದರೆ, ನಾನ್ ಅಗ್ರಿಕಲ್ಚರಿಸ್ಟ್ ಆಗಿರುವವರು ಬೇರೆ ಯಾವ ಜಮೀನನ್ನೂ ತೆಗೆದು ಕೊಳ್ಳುವುದಕ್ಕೆ ಬರುವುದಿಲ್ಲ. ಎಜುಕೇಷನಲ್ ಸೊಸೈಟಿಯವರು ಜಮೀನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ನಾನ್ ಅಗ್ರಿಕಲ್ಚರ್‌ರಿಂಗ್ ಎಂದು ಮಾಡಿಸಿ ತೆಗೆದುಕೊಳ್ಳ ಬೇಕಾಗುತ್ತದೆ. ಈ ರೀತಿ ಮಾಡಿಸುವುದಕ್ಕೆ ಸಾಕಷ್ಟು ಸಮಯ ಹಾಳಾಗುತ್ತದೆ. ಆದುದರಿಂದ ತಾವು 5 ಎಕರೆ ತೆಗೆದುಕೊಳ್ಳಬಹುದೆಂದು ಏನು ಅವಕಾಶ ಮಾಡಿಕೊಟ್ಟಿದ್ದೀರಿ ಇದು ರೀಸನಬಲ್ ಆಗಿದೆ. ಇದು ಒಂದು ವಿಚಾರ ಆಮೇಲೆ ಸೆಕ್ಷನ್ 122 (ಎ) ಗೆ ಏನು ತಾವು ತಿದ್ದುಪಡಿಯನ್ನು ತಂದಿದ್ದೀರಿ ಇದನ್ನು ತರಬಾರದಿತ್ತು, ಇದನ್ನು

ಮಾನ್ಯ ಖರ್ಗೆಯವರು ಏತಕ್ಕೆ ತಂದರೋ ಗೊತ್ತಿಲ್ಲ. ಮಾನ್ಯ ಖರ್ಗೆಯವರು ಕಂದಾಯ ಮಂತ್ರಿಗಳಾಗಿರುವಾಗ ಇಂಥ ಕಾಯಿದೆ ಬಂತಲ್ಲಾ ಎಂದು ನನಗೆ ಆಶ್ಚರ್ಯವಾಯಿತು. ಆದುದರಿಂದ ತಾವು ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ ಶ್ರಿ ಸಿ.ಬೈರೇಗೌಡ: (ವೇಮಗಲ್):- ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ನಮ್ಮ ರಾಜ್ಯದಲ್ಲೇ ಅಲ್ಲದೆ ಇಡೀ ದೇಶದಲ್ಲೇ ಒಂದು ಚರಿತ್ರಾರ್ಹವಾದ ಕಾನೂನನ್ನು ತಂದಿದ್ದು ಎಂದರೆ ಅದು ಭೂ ಸುಧಾರಣಾ ಕಾಯಿದೆ. ಈಗ ಇದಕ್ಕೆ ಒಂದು ತಿದ್ದುಪಡಿಯನ್ನು ತರತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ಇದೇ ಸದನದಲ್ಲಿ ಒಂದು ವಿಚಾರವನ್ನು ಅನೇಕಸಾರಿ ಒತ್ತಾಯ ಮಾಡುತ್ತಾ ಬಂದಿದ್ದೇನೆ. ಬೆಂಗಳೂರಿನ ಸುತ್ತಮುತ್ತಲೂ ಸಾವಿರಾರು ಈ ಭೂ ಸುಧಾರಣಾ ಕಾನೂನನ್ನು ಉಲ್ಲಂಘನೆ ಮಾಡರತಕ್ಕಂಥ ನಿದರ್ಶನಗಳು ಇವೆ. ಒಂದಲ್ಲ ಎರಡಲ್ಲ ಸಾವಿರಾರು ಇದೆ. ಇದನ್ನೆಲ್ಲ ತಾವು ಕಾನೂನು ರೀತ್ಯ ಪರಿಗಣಿಸಿ ಇದನ್ನೆಲ್ಲ ಇತ್ಯರ್ಥ ಮಾಡಬೇಕಾಗಿರುತ್ತದೆ. ಮತ್ತು ಈ ಕಾನೂನನ್ನು ಉಲ್ಲಂಘನೆ ಮಾಡಿರತಕ್ಕಂಥವರಿಗೆ ತಾವು ಫೈನ್ ಹಾಕುವುದಕ್ಕೂ ಕೂಡ ಈಗಿರತಕ್ಕಂಥ ಕಾನೂನಿಲ್ಲಿ ಅವಕಾಶ ಇದೆ. ಇದರಿಂದ ಕೋಟ್ಯಾಂತರ ರೂಪಾಯಿಗಳ ಜಮೀನು ಸರ್ಕಾರದ ವಶಕ್ಕೆ ಬರುತ್ತದೆ. ಈ ಕೆಲಸವನ್ನು ದಯವಿಟ್ಟು ಮಾಡಿ ಎನ್ನತಕ್ಕಂಥ ವಿಚಾರವನ್ನು ನಾನು ಅನೇಕ ಸಂದರ್ಭಗಳಲ್ಲಿ ಒತ್ತಾಯಮಾಡಿದ್ದೇನೆ. ಅದು ಯಾವುದಕ್ಕೂ ಕೂಡ ಸರ್ಕಾರದವರು ಉತ್ತರ ಕೊಟ್ಟಿಲ್ಲ. ಇವತ್ತು ಕೆಲವು ಸಮಸ್ಯೆಗಳು ಇವೆ. ನಾನು ಇಲ್ಲಿ ಇಲ್ಲದಿರುವವರ ಹೆಸರನ್ನು ಹೇಳಬಾರದೆನ್ನುವ ಕಾರಣಕ್ಕೋಸ್ಕರ ಹೇಳುತ್ತಿಲ್ಲ. ನನಗೆ ಗೊತ್ತಿರತಕ್ಕಂಥ ಮಾಹಿತಿಯ ಮೇಲೆ ಒಂದೇ ಒಂದು ಕುಟುಂಬದ ಭೂಮಿ, ಅದು ವ್ಯವಸಾಯದ ಭೂಮಿ. ಈ ಕಾನೂನು ಇವತ್ತು ನಮ್ಮ ರಾಜ್ಯದಲ್ಲಿ ಜಾರಿಯಲ್ಲಿದೆ. ಆ ಕುಟುಂಬಕ್ಕೆ ಸೇರಿದ ಭೂಮಿ ಸುಮಾರು 13 ಸಾವಿರ ಎಕರೆ ಇದೆ. ಅವರು ಏನು ಮಾಡಿದ್ದಾರೆಂದರೆ, ಅದಕ್ಕೆಲ್ಲ ಕಾನೂನಿನಲ್ಲಿ ವ್ಯವಸ್ಥೆ ಮಾಡತಕ್ಕಂಥದ್ದು ಬಹಳ ಚನ್ನಾಗಿ ಬಂದಿದೆ. ಯಾರ ಹೆಸರಿನಲ್ಲಿ ಭೂಮಿ ಇದೆಯೋ ಅವರ ಹೆಸರಿನಲ್ಲಿಯೇ ಖಾತೆ ಇವತ್ತಿನವರೆಗೂ ಇದೆ, ನಾನು ತೋರಿಸಿಕೊಡುತ್ತೇನೆ. ಆದರೆ ಜಮೀನು ಹತ್ತಿರ ಹೋಗಿ ಕೇಳಿದರೆ ಇಂಥವರ ಜಮೀನು, ಇಂಥವರ ಭೂಮಿ ಎಂದು ಹೇಳುತ್ತಾರೆ. ಬನ್ನೇರುಘಟ್ಟ ರಸ್ತೆಯಿಂದ ಹಿಡಿದು ಈ ಕಡೆ ಕನಕಪುರ ರಸ್ತೆಯಲ್ಲಿರತಕ್ಕಂಥ ಭೂಮಿಯೆಲ್ಲ ಯಾರದೆಂದು ಕೇಳಿದರೆ ಇಂಥವರದು ಎಂದು ಹೇಳುತ್ತಾರೆ. ಇದೆಲ್ಲ ಮಾನ್ಯ ಕಂದಾಯ ಮಂತ್ರಿಗಳಿಗೂ ಕೂಡ ಗೊತ್ತಿದೆ. ಕೇವಲ ಇಲ್ಲೇ ಭೂಮಿ ಇದೆ ಎಂದು ನಾನು ಹೇಳುತ್ತಿಲ್ಲ. ಇಡೀ ರಾಜ್ಯದಲ್ಲಿ ಅನೇಕ ತಾಲ್ಲೂಕುಗಳಲ್ಲಿ, ಅನೇಕ ಜಿಲ್ಲೆಗಳಲ್ಲಿ ಈ ರೀತಿಯಾದ ಭೂಮಿಯನ್ನು ಹೊಂದಿರತಕ್ಕಂಥವರು ಕೂಡ ಇದ್ದಾರೆ. ಇವತ್ತಿನದಿವಸ ಇದರಲ್ಲಿ ಅನೇಕ ವಿಚಾರಗಳು ಸರ್ಕಾರಕ್ಕೂ ಕೂಡ ನೇರವಾಗಿ, ಪ್ರತ್ಯಕ್ಷವಾಗಿ ಕೂಡ ಗೊತ್ತಿದೆ. ಈ ರೀತಿ ನಡೆಯುತ್ತಿದೆ ಎನ್ನುವುದು ಕೂಡ ಗೊತ್ತಿದೆ. ಈ ವಿಚಾರದಲ್ಲಿ ಅನೇಕ ಸಂದರ್ಭದಲ್ಲಿ ಒತ್ತಾಯ ಮಾಡಿದರೂ ಸಹ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ. ಯಾರೂ ಏನೂ ಗೊತ್ತಿಲ್ಲದಿರತಕ್ಕಂಥ ರೀತಿಯಲ್ಲಿದ್ದಾರೆ. ಮಾನ್ಯ ಕೌಜಲಗಿಯವರು ಹೇಳಿದ ರೀತಿಯಲ್ಲಿ ಯಾರೋ ಗೊತ್ತಿಲ್ಲದಿರತಕ್ಕವರು ಸಣ್ಣ ತಪ್ಪು ಮಾಡಿದರೆ ಅದನ್ನು ಇವತ್ತು ಏನೋ ಮಾಡಲಿಕ್ಕೆ ಹೊರಟಿದ್ದಾರೆ. ಸ್ವಾಮಿ ಇವತ್ತಿನದಿವಸ ಹೇಳುತ್ತಿದ್ದೇನೆ. ಇದರ ಬಗ್ಗೆ ಸದನದ ಒಂದು ಸಮಿತಿಯನ್ನು ರಚನೆ ಮಾಡಿ ಇದೆಲ್ಲ ವಿಚಾರಣೆಯಾಗಲಿ ಮಾಡಬಾರದು. ಯಾರು ಯಾರು ಈ ಕಾನೂನನ್ನು ಉಲ್ಲಂಘನೆ ಮಾಡಿದ್ದಾರೆ, ಅವರ ಮೇಲೆ ಕ್ರಮ ಏತಕ್ಕೆ ಜರುಗಿಸಬಾರದು? ಈ ರೀತಿ ಕಾನೂನನ್ನು ಉಲ್ಲಂಘನೆ

ಮಾಡಿ ಸುಮಾರು 13 ಸಾವಿರ ಎಕರೆ ಭೂಮಿಯನ್ನು ಇವತ್ತು ಒಂದೇ ಕುಟುಂಬದವರು ವಶಪಡಿಸಿಕೊಂಡಿರತಕ್ಕಂಥ ಉದಾಹರಣೆ ನಮ್ಮ ರಾಜ್ಯದಲ್ಲಿದೆ. ಹೀಗೆ ಮಾಡಿದ್ದಾರೆಂದು ಪದೇ ಪದೇ ಹೇಳಿದ್ದರೂ ಕೂಡ ಅದಕ್ಕೆ ಸರ್ಕಾರ ಇವತ್ತಿನವರೆಗೆ ಏನೂ ಮಾಡಿಲ್ಲ. ಈ ಕೆಲಸವನ್ನು ದಯವಿಟ್ಟು ಸರ್ಕಾರ ಇವತ್ತಿನದಿವಸ ಮಾಡಬೇಕು, ಇಲ್ಲದಿದ್ದರೆ ಇವತ್ತು ಇದು ಒಂದು ಬೂಟಾಟಿಕೆ ಕಾನೂನು ಆಗುತ್ತದೆ, ಕೇವಲ ಕಾಗದದ ಮೇಲೆ ಉಳಿಯತಕ್ಕಂಥ ಕಾನೂನಾಗುತ್ತದೆ. ಕೇವಲ ಕಾಗದದ ಮೇಲೆ ಇರುವುದಕ್ಕೆ ಕಾನೂನನ್ನು ಮಾಡುವುದಕ್ಕೆ ನಾವು ಇಲ್ಲಿ ಬಂದಿಲ್ಲ. ಕಾಗದದ ಮೇಲೆ ಇರತಕ್ಕಂಥ ಕಾನೂನು ಜಾರಿಯಾಗಬೇಕಾದ್ದು ಅತಿ ಅವಶ್ಯಕ ಇದೆ. ಆದ್ದರಿಂದ ಇವತ್ತು ಯಾವ ಕಾನೂನು ಮಾಡಿದರೂ ಕೂಡ ಜಾರಿಯಾಗಬೇಕು ಎಂದು ಕುಳಿತಿರುತ್ತದೆ. ಜಾರಿಯಾಗದೆ ಇರತಕ್ಕಂಥ ಕಾನೂನನ್ನು ಕಾಗದದಮೇಲೆ ಇಟ್ಟುಕೊಂಡು ಇವತ್ತಿನದಿವಸ ನಾವು ಅದಕ್ಕೆ ತಿದ್ದುಪಡಿ ಮಾಡುತ್ತೇವೆ ಎನ್ನಕ್ಕಂಥ ಬೂಟಾಟಿಕೆ ಏನಿದೆ ಈ ಬೂಟಾಟಿಕೆಯನ್ನು ನಾನು ಖಂಡತುಂಡವಾಗಿ ವಿರೋಧಿಸುವುದಕ್ಕೆ ಇಚ್ಛೆಪಡುತ್ತೇವೆ. ಇದೆಲ್ಲವೂ ಸರ್ಕಾರ ನಡೆಸುತ್ತಿರತಕ್ಕಂಥವರಿಗೂ ಗೊತ್ತಿದೆ; ಗೊತ್ತಿದ್ದರೂ ಕೂಡ ಇವತ್ತಿನದಿವಸ ಅವರ ಜೊತೆಯಲ್ಲಿ ಶಾಮೀಲಾಗಿರುವ ಕಾರಣದಿಂದ ಅವರಮೇಲೆ ಏನೂ ಕ್ರಮವನ್ನು ತೆಗೆದುಕೊಳ್ಳದಿರತಕ್ಕಂಥ ನಿದರ್ಶನಗಳನ್ನು ನಾವು ನೋಡುತ್ತಿದ್ದೇವೆ. ಇದು ಹೋಗಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ಶಾಮೀಲಾಗಿರಲಿಲ್ಲವೇ ಎಂದು ನಾನು ನಿಮ್ಮನ್ನು ಕೇಳಬೇಕಾಗುತ್ತದೆ. ಆರು ವರ್ಷ ನೀವು ಅಧಿಕಾರದಲ್ಲಿದ್ದಿರಿ. ಆಗ ನೀವು ಷಾಮೀಲಾಗಿದ್ದಿರಿ. ನೀವೂ ಮಿನಿಸ್ಟರ್ ಆಗಿದ್ದಿರಿ. ಆ ರೀತಿ ಹೇಳಬೇಡಿ. ನೀವು ಹೇಳಬೇಕಾದ್ದನ್ನು ನೇರವಾಗಿ ಬರೆದುಕೊಡಿ ಬೇಕಾದರೆ ಎನ್‌ಕ್ವೈರಿ ಮಾಡಿಸುತ್ತೇವೆ. ಅದನ್ನು ಬಿಟ್ಟು ನೀವು ಅವರ ಜೊತೆ ಶಾಮೀಲಾಗಿದ್ದೀರೆಂದರೆ ಏನು ಅರ್ಥ. ನಾನು ಹೇಳುತ್ತೇನೆ, ಏಳು ವರ್ಷ ಆಡಳಿತ ನಿಮ್ಮ ಕೈಯಲ್ಲಿ ಇತ್ತಲ್ಲ, ಆಗ ಮಾಡಬೇಕಾಗಿತ್ತು.

ಶ್ರೀ ಸಿ. ಬೈರೇಗೌಡ:- ಇದನ್ನು ನಾನು ಈಗ ಹೆಳುತ್ತಿಲ್ಲ. ಹಿಂದೆಯೂ ಕೂಡ ಈ ಮಾತನ್ನು ಹೇಳಿದ್ದೇನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟು ಹೇಳುತ್ತಾ, ಇವತ್ತಿನ ದಿವಸ ವಿದ್ಯಾ ಸಂಸ್ಥೆಗಳ ಬಗ್ಗೆ ಹೇಳುವುದಕ್ಕೆ ಹೊರಟಿದ್ದೇನೆ. ಈಗಿರತಕ್ಕ ಕಾನೂನಿನಲ್ಲಿ ನಾನ್ ಇಂಡಿವಿಜುಯಲ್ಸ್ ಯಾರಿದ್ದಾರೆ ಅವರು ವ್ಯವಸಾಯ ಭೂಮಿಯನ್ನು ಹೊಂದುವುದಕ್ಕೆ ಸಾಧ್ಯವಿಲ್ಲ. ಇವತ್ತು ಕೆಲವು ವಿದ್ಯಾ ಸಂಸ್ಥೆಗಳು ಸರಿಯಾಗಿ ನಡೆಯತಕ್ಕುವು ಇವೆ. ಆದರೆ ಕಾಗದದ ಮೇಲೆ ಇರತಕ್ಕ ವಿದ್ಯಾ ಸಂಸ್ಥೆಗಳು ಕೂಡಾ ಇವೆ. ಇವತ್ತು ತಿದ್ದುಪಡಿ ತರತಕ್ಕ ಸಂದರ್ಭದಲ್ಲಿ ಏನಾಗುತ್ತದೆಂದರೆ, ಅನುಕೂಲ ಪಡೆಯತಕ್ಕವರು ಯಾರೆಂದರೆ , ಕಾಗದದ ಮೇಲೆ ವಿದ್ಯಾ ಸಂಸ್ಥೆಗಳನ್ನು ನಡೆಸತಕ್ಕ ಸಂಸ್ಥೆಗಳು ಏನಿವೆ ಅವರು ಇದನ್ನು ದುರುಪಯೋಗ ಪಡಿಸಿಕೊಳ್ಳತಕ್ಕ ಸಂದರ್ಭಗಳೇ ಜಾಸ್ತಿ. ಅದಕ್ಕೆ ಅವಕಾಶ ಇಲ್ಲದ ರೀತಿಯಲ್ಲಿ ಮಾಡಬೇಕಾಗಿರತಕ್ಕದ್ದು ಅವಶ್ಯಕತೆ ಇದೆ. ವಿದ್ಯಾಭ್ಯಾಸದ ಎಲ್ಲಾ ಹಂತದಲ್ಲಿ ವಿದ್ಯಾಭ್ಯಾಸವನ್ನು ಸರ್ಕಾರ ಕೊಡಲು ಸಾಧ್ಯವಿಲ್ಲ. ಹಳ್ಳಿಗಳಲ್ಲಿರತಕ್ಕ ಅನೇಕ ಪಾಠಶಾಲೆಗಳನ್ನು ನೋಡಿದರೆ ಕಣ್ಣಿನಲ್ಲಿ ನೀರು ಬರುತ್ತದೆ. ಅಂತಹ ದುಸ್ಥಿತಿಯಲ್ಲಿ ಸರ್ಕಾರ ನಡೆಸತಕ್ಕ ಪಾಠಶಾಲೆಗಳು ಇವೆ. ಒಳ್ಳೆಯ ರೀತಿಯಲ್ಲಿ ವಿದ್ಯಾ ಸಂಸ್ಥೆಗಳನ್ನು ನಡೆಸತಕ್ಕವೂ ಇವೆ. ಅಂತಹ ಸಂಸ್ಥೆಗಳಿಗೆ ಏನಾದರೂ ಅನುಕೂಲ ಮಾಡಿಕೊಟ್ಟರೆ ಸಂತೋಷ. ನನಗೆ ಅನುಮಾನ ಇರತಕ್ಕದ್ದು ಏನೆಂದರೆ, ಈ ಕಾನೂನನ್ನು ದುರುಪಯೋಗಪಡಿಸಿಕೊಳ್ಳತಕ್ಕದ್ದು, ಈಗಾಗಲೇ ಹೇಳಿದ ರೀತಿಯಲ್ಲಿ ಕಾಗದದ ಮೇಲೆ ನಡೆಯತಕ್ಕ

ವಿದ್ಯಾ ಸಂಸ್ಥೆಗಳು ಹೆಚ್ಚಿಗೆ ಉಪಯೋಗ ಪಡೆಯತಕ್ಕ ರೀತಿಯಲ್ಲಿ ಇವೆ. ಆದಕ್ಕೆ ಅವಾಕಶ ಇಲ್ಲದ ರೀತಿಯಲ್ಲಾ ಸರ್ಕಾರ ಆಲೋಚಿಸಬೇಕು. ಹೆಚ್ಚುವರಿ ಭೂಮಿಯನ್ನು ಕೊಡಬೇಕು, ಶೇಕಡ 75 ರಷ್ಟು ಭೂಮಿಯನ್ನು ನಿಮ್ನ ವರ್ಗಗಳಿಗೆ ಕೊಡಬೇಕೆಂಬ ವಿಚಾರವನ್ನು ಹೇಳುತ್ತಿದ್ದಾರೆ. ನಿಮ್ನ ವರ್ಗಗಳ ಜೊತೆಯಲ್ಲಿ ಹಿಂದುಳಿದ ವರ್ಗಗಳೂ ಇವೆ. ಅವರ ಗತಿ ಏನು? ಅವರಿಗೆ ಯಾವ ರಿಸರ್ವೇಷನ್ ಇಟ್ಟಿದ್ದೀರಿ ? ಹಿಂದುಳಿದ ವರ್ಗಗಳು ಏನಿವೆ ಅವುಗಳಿಗೂ ನಿಮ್ನ ವರ್ಗಗಳಿಗೂ ಯಾವ ರೀತಿ ರಿಸರ್ವೇಷನ್ ಇಟ್ಟಿದ್ದೀರಿ, ಅವರಿಗೂ ರಿಸರ್ವೇಷನ್ ಇಡಬೇಕಾಗಿರತಕ್ಕ ಅವಶ್ಯಕತೆ ಇದೆ. ಅದನ್ನು ಕಾನೂನಿನಲ್ಲಿ ಅಳವಡಿಸಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ಮಾತನ್ನು ಮುಗಿಸುತ್ತೇನೆ.

+ ಡಾ. ಎನ್. ಬಿ. ನಂಜಪ್ಪ : (ಶ್ರವಣಬೆಳಗೊಳ):- ಮಾನ್ಯ ಅಧ್ಯಕ್ಷರೇ, ಈ ದಿವಸ ಸದನದ ಮುಂದೆ ಇಟ್ಟಿರತಕ್ಕ ಈ ಅಮೆಂಡ್‌ಮೆಂಟ್ ಬಿಲ್ ಏನಿದೆ ಇದು ನಿಜವಾಗಿಯೂ ರೆವಲ್ಯೂಷನರಿ ಬಿಲ್ ಆಗಿದೆ. ಏಕೆಂದರೆ, ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಸ್ಟಾರ್ಟ್ ಮಾಡತಕ್ಕ ಸಂದರ್ಭದಲ್ಲಿ ಅವರು ಲ್ಯಾಂಡ್ ಕನ್‌ವರ್ಷನ್ ಮಾಡಿ ಎಲ್ಲ ಮಾಡುವುದಕ್ಕೆ ಬೇಕಾದಷ್ಟು ಪ್ರೊಸಿಜರ್ ಇದೆ. ಲ್ಯಾಂಡ್ ಸರ್ಕಾರದಿಂದ, ಡಿ.ಸಿ.ಲೆವೆಲ್‌ನಿಂದ ಕನ್‌ವರ್ಷನ್ ಆಗಬೇಕಾಗುತ್ತದೆ. ಇಂಡಸ್ಟ್ರಿಗಳನ್ನು ಪ್ರಾರಂಭ ಮಾಡುವುದಕ್ಕೆ ಕೂಡ ಬಹಳ ತೊಂದರೆ ಆಗಿತ್ತು. ಇವತ್ತು ಈ ತಿದ್ದುಪಡಿ ಮಸೂದೆಯನ್ನು ತಂದಿರತಕ್ಕದ್ದು ನಿಜಕ್ಕೂ ಶ್ಲಾಘನೀಯ. ಇದು ಒಂದು ಕ್ರಾಂತಿಕಾರಕ ತಿದ್ದುಪಡಿ ಎಂದು ಹೇಳಬಹುದು. ಇದನ್ನು ಮನ:ಪೂರ್ವಕವಾಗಿ ಒಪ್ಪಿಕೊಂಡರೆ ಬಹಳ ಅನುಕೂಲವಾಗುತ್ತದೆ. ಇವತ್ತಿನ ದಿವಸ ಎಜುಕೇಷನ್ ಇನ್‌ಸ್ಟಿಟ್ಯೂಷನ್ಸ್ ಮತ್ತು ರೂರಲ್ ಇಂಡಸ್ಟ್ರೀಸ್ ಬೆಳೆಯುವುದಕ್ಕೆ ಇದು ತುಂಬಾ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಲ್ಯಾಂಡ್ ರಿಫಾರಮ್ಸ್‌ನಲ್ಲಿ ಏನು ರಿರ್ವೇಷನ್ ಇದೆಯೋ ಅದರ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. 75 ಪರ್ಸೆಂಟ್ ನಿಮ್ನವರ್ಗಗಳಿಗೆ ಮಾಡಿರತಕ್ಕದ್ದು ಸಾಧುವಾದುದು. ಆದರೆ ಅಲ್ಲಿ ಏನಾಗಿದೆ ಎಂದರೆ, ಬಗರ್‌ಹುಕುಂ ಸಾಗುವಳಿ ಮಾಡಿ ಗೋಮಾಳವನ್ನು ಎಲ್ಲರೂ ಉತ್ತು ಆಕ್ಯುಪೈ ಮಾಡಿಕೊಂಡಿದ್ದಾರೆ. ಅದರಲ್ಲಿ ಅನೇಕ ಬಡವರು ಇದ್ದಾರೆ, ಲ್ಯಾಂಡ್‌ಲೆಸ್ ಪೀಪಲ್ ಇದ್ದಾರೆ. ಒಂದೊಂದು ಗ್ರಾಮದಲ್ಲಿ 75 ಪರ್ಸೆಂಟ್ ರಿಸರ್ವೇಷನ್ ಹೋದರೆ, ಬೇರೆಯವರು ಉತ್ತಿರತಕ್ಕ 10-20 ವರ್ಷಗಳಿಂದ ಅನುಭವಿಸಿಕೊಂಡು ಬಂದಿರತಕ್ಕ, ಆ ಜಾಗದಲ್ಲಿ ವ್ಯವಸಾಯ ಮಾಡತಕ್ಕ ಅನೇಕ ಜನ ಬಡವರಿಗೆ. . . .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸರ್ಪ್ಲಸ್ ಲ್ಯಾಂಡ್ ಬೇರೆ. ಲ್ಯಾಂಡ್ ರಿಫಾರಮ್ಸ್ ಕೆಳಗೆ ಏನು ಸರ್‌ಪ್ಲಸ್ ಲ್ಯಾಂಡ್ ಬರುತ್ತದೆ, ಅದು ಡಿಸ್ಟ್ರಿಬ್ಯೂಷನ್ ಆಗತಕ್ಕದ್ದು. ತಾವು ಹೇಳತಕ್ಕದ್ದು ಗೋಮಾಳ ಲ್ಯಾಂಡ್, ಗವರ್ನಮೆಂಟ್ ಲ್ಯಾಂಡ್. ಗೋಮಾಳ ಲ್ಯಾಂಡ್ ಮತ್ತು ಗವರ್ನ್‌ಮೆಂಟ್ ಲ್ಯಾಂಡ್ ಏನಿದೆ ಅದರಲ್ಲಿ ಏನಾಗಿದೆ ಎಂದರೆ, ಎಲ್ಲಾ ತರಹದ ಜಮೀನುಗಳಲ್ಲಿ ಬೇರೆಯವರು ಒತ್ತುವರಿ ಮಾಡಿರತಕ್ಕದ್ದು ಜಾಸ್ತಿ ಇದೆ. ಉದಾಹರಣೆಗೆ ಹೇಳಬೇಕೆಂದರೆ, ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಹಿಂದೆ ಸರ್ಕಾರದವರು ಹಂಚಿದರೆ 50 ಪರ್ಸೆಂಟ್ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಮತ್ತು 50 ಪರ್ಸೆಂಟ್ ಬೇರೆಯವರಿಗೆ ಎಂದು ಇತ್ತು. ಒತ್ತುವರಿ ಆಗಿರತಕ್ಕ ಲೆಕ್ಕ ಪತ್ರ ತೆಗೆದು ನೋಡಿದಾಗ ಶೇಕಡ 70 ರಷ್ಟು ಭೂಮಿಯನ್ನು ಬೇರೆಯವರು ಒತ್ತುವರಿ ಮಾಡಿದ್ದಾರೆ, ಕೇವಲ ಶೇಕಡ 30 ರಷ್ಟು ಭೂಮಿಯನ್ನು ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಮಾಡಿದ್ದಾರೆ. ನೀವು ಹೇಳಿದಹಾಗೆ, ಆ ಭೂಮಿಯಂತೂ ಕಸಿದುಕೊಳ್ಳುವುದಕ್ಕೆ ಬರುವುದಿಲ್ಲ.

ಅಥವಾ ಅವರನ್ನು ಡಿಸ್‌ಪೊಸೆಸ್ ಮಾಡುವುದಕ್ಕೆ ಬರುವುದಿಲ್ಲ. ಅದನ್ನು ಅವರಿಗೆ ರೆಗ್ಯುಲರೈಸ್ ಮಾಡಿ, ಇಲ್ಲಿ ಏನು ಅವೈಲಬಲ್ ಲ್ಯಾಂಡ್ ಇರುತ್ತದೋ ಅದು 50 ರ ಬದಲು 75ಕ್ಕೆ ಹೆಚ್ಚು ಮಾಡಬೇಕೆಂದು ತಂದಿದ್ದೇವೆಯೇ ಹೊರತು, ಇರತಕ್ಕದ್ದನ್ನು ಕಸಿದುಕೊಂಡು ಕೊಡಬೇಕು ಎಂದು ಅಲ್ಲ.

ಡಾ.ಎನ್. ಬಿ. ನಂಜಪ್ಪ:- ಇದು ನಿಜವಾಗಿಯೂ ಒಳ್ಳೆಯ ಅಮೆಂಡ್‌ಮೆಂಟ್. ಆದ್ದರಿಂದ ನಿಜವಾಗಿ ಇದನ್ನು ಸ್ವಾಗತ ಮಾಡುತ್ತೇವೆ ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಪ್ರೊ.ಎಂ. ಡಿ. ನಂಜುಂಡಸ್ವಾಮಿ: (ಧಾರವಾಡ ಗ್ರಾಮಾಂತರ):- ಸನ್ಮಾನ್ಯ ಸಭಾಧ್ಯಕ್ಷರೇ, ಈ ತಿದ್ದುಪಡಿಯ 109ನೇ ಸೆಕ್ಷನ್ ಬಗ್ಗೆ ನಾನೇನೂ ಮಾತನಾಡುವುದಿಲ್ಲ. ಆದರೆ ಸೆಕ್ಷನ್ 77ಕ್ಕೆ ಏನು ತಿದ್ದುಪಡಿ ತರಬೇಕು ಎಂದು ಮಾಡಿದ್ದಾರೆ ಅದಕ್ಕೆ ಸಂಬಂಧಪಟ್ಟಹಾಗೆ ಮಂತ್ರಿಗಳು ಒಂದು ವಿಷಯ ಗಮನದಲ್ಲಿಟ್ಟುಕೊಂಡು ಇದನ್ನು ಮಂಡಿಸಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಈಗ ತಿದ್ದುಪಡಿ ಮಾಡಬೇಕೆಂದಿರುವ ಸೆಕ್ಷನ್ 77 ಏನಿದೆ ಅದು ನ್ಯಾಯಾಲಯದಲ್ಲಿ ಒಂದು ನಿಮಿಷ ನಿಲ್ಲುವುದಿಲ್ಲ. Section 77 as proposed to be amended by this Bill will not stand the test of judicial scrutiny even for a single minute. It will be struck down as unconstitutional on the ground that the reservation is excessive. ಅದಕ್ಕೆ ಕಾರಣ ಇಷ್ಟೆ. ನನ್ನ ಅಭಿಪ್ರಾಯದಲ್ಲಿ ಸೆಕ್ಷನ್ 77 ರಲ್ಲಿ ಈಗಾಗಲೇ ಏನಿದೆ ಅದು ಅನ್‌ಕಾನ್‌ಸ್ಟಿಟ್ಯೂಷನಲ್ ಪ್ರಾವಿಷನ್ನೇ 50 ಪರ್ಸೆಂಟ್ ಎಂದು ಇರುವುದೂ ಅನ್‌ಕಾನ್‌ಸ್ಟಿಟ್ಯೂಷನಲ್. ಆದರೆ ಯಾರೂ ಪ್ರಶ್ನೆ ಮಾಡಲಿಲ್ಲ. ಆದ್ದರಿಂದ ಇಲ್ಲಿ ಇನ್ನೂ ಉಳಿದುಕೊಂಡಿದೆ. ಕೆಳಗಡೆ ಯಾವ ಕ್ಯಾಟಗರೀಸ್ ಆಫ್ ಪರ್ಸನ್ಸ್ ಹೇಳುತ್ತಾರೆ ಎಂದರೆ ಆರು ಕ್ಯಾಟಗರೀಸ್ ಆಫ್ ಪರ್ಸನ್ಸ್ ಹೇಳುತ್ತಾರೆ. " depriving remaining 50% of the persons (i) Dispossessed tenants who are not registered as occupants; (ii) Displaced tenants having no land; (iii) Landless agricultural labourers; (iv) Landless persons and ex-Military personnel whose gross annual income does not exceed rupees two thousand; (v) Released bonded labourers; (vi) other persons residing in village in the same Panchayat and whose gross annual income does not exceed rupees two thousand;".. ಒಟ್ಟಾರೆ ಸೆಕ್ಷನ್ 77 ಭೂಹೀನ ರೈತರಿಗೆ ಹಂಚುವಂಥ ಒಂದು ಉದ್ದೇಶದಿಂದ ಮಾಡಿರುವ ಒಂದು ಕಾನೂನು. ಇಲ್ಲಿ ರಿಸರ್ವೇಷನ್ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಾ ಇರುವುದು ಜಾತಿ ಆಧಾರದ ಮೇಲೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ. ಒಟ್ಟಾರೆ ನಮ್ಮ ಮೀಸಲಾತಿ ಕಾನೂನುಗಳು ಇಲ್ಲಿ ತಕ್ಷಣ ಜಾರಿಗೆ ಬರುತ್ತವೆ. ಇದಕ್ಕೆ ಸಂಬಂಧಪಟ್ಟಹಾಗೆ ಒಂದು ಅಂಕಿಅಂಶವನ್ನು ಸನ್ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. The number of SC/ST landless persons in Karnataka is less than the number of landless persons belonging to other backward classes. ಆ ಕಾರಣ

ಈ ಕಾನೂನು ನ್ಯಾಯಾಲಯದಲ್ಲಿ ಒಂದು ನಿಮಿಷ ನಿಲ್ಲುವುದಿಲ್ಲ. Section 77 as proposed to be amended by this Bill . . . . ಆ ಕಾರಣ ದಯವಿಟ್ಟು ಇದನ್ನು ವಾಪಸ್ ತೆಗೆದುಕೊಂಡು ಮತ್ತೆ ಆಲೋಚನೆ ಮಾಡಿ ಬೇರೆ ಒಂದು ತಿದ್ದುಪಡಿ ತರಬೇಕೆಂದು ನಾನು ವಿನಂತಿ ಮಾಡುತ್ತೇನೆ.

+ ಶ್ರೀ ಬಿ. ಹೆಚ್. ಬನ್ನಿಕೋಡ್: (ಹಿರೇಕೆರೂರು):- ಮಾನ್ಯ ಅಧ್ಯಕ್ಷರೇ, ಇದರಲ್ಲಿ ಪ್ರಾಮುಖ್ಯವಾಗಿ ಸೆಕ್ಷನ್ 122-ಎ ರಲ್ಲಿ ಇದನ್ನು ಪುನ: 1959ನೇ ಇಸವಿಯವರೆಗೆ ಮುಂದುವರಿಸಲಿಕ್ಕೆ ಅಧಿಕಾರ ಕೊಡಬೇಕು, ಭೂನ್ಯಾಯ ಮಂಡಲಿಯಲ್ಲಿ ಈಗಾಗಲೇ ನಿರ್ಣಯ ಮಾಡಿದಂಥ ನಿರ್ಣಯಗಳನ್ನು ಅದೇ ಭೂ ನ್ಯಾಯ ಮಂಡಲಿ ಮರುಪರಿಶೀಲನೆ ಮಾಡಿ ಪುನ: ಬೇರೆ ನಿರ್ಣಯಕ್ಕೆ ಬರುವುದಕ್ಕೆ ಅವಕಾಶ ಕೊಡುವಂಥ ಒಂದು ಕಾನೂನು ಇದು. 1984 ರಿಂದ ಅವಕಾಶ ಕೊಟ್ಟಿದ್ದರಿಂದ ಈಗಾಗಲೇ ಹಳ್ಳಿಗಳಲ್ಲಿ ಸಾಕಷ್ಟು ಅನ್ಯಾಯಗಳು ನಡೆದುಹೋಗಿವೆ. ಇವತ್ತು ಯಾವ ನ್ಯಾಯಾಲಯ ಭೂ ನ್ಯಾಯಮಂಡಲಿಯಲ್ಲಿ ತಂದ ಎಲ್ಲಾ ಕಾಗದಪತ್ರಗಳನ್ನು ಪುರಾವೆಗಳನ್ನು ಪರಿಶೀಲಿಸಿ ಒಂದು ನಿರ್ಣಯಕ್ಕೆ ಬಂದಿರುತ್ತದೆ ಮತ್ತೆ ರಾಜಕೀಯ ಪರಿಸ್ಥಿತಿ ಬದಲಾವಣೆ ಆದಕೂಡಲೇ ಇನ್ನೊಂದು ನಿರ್ಣಯಕ್ಕೆ ಬರುವ ಒಂದು ಹವ್ಯಾಸ ಈ ಸರ್ಕಾರ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದೆ. ಬೇರೆ ಅಪೀಲ್ ಇದ್ದರೆ, ಅಥವಾ ರಿವಿಜನ್ ಇದ್ದರೆ ನ್ಯಾಯಾಂಗಕ್ಕೆ ಅಧಿಕಾರ ಕೊಟ್ಟರೆ ಸರಿ. ಯಾವ ಭೂನ್ಯಾಯಮಂಡಲಿ ತನ್ನ ತೀರ್ಪನ್ನು ಕೊನೆಯದನ್ನಾಗಿ ಕೊಟ್ಟು ಮುಗಿಸಿ ಹಳೆಯದಾಗಿ ಹೋಗಿದೆ, ಈಗಲೇ ನಾಲ್ಕೆಂಟತ್ತು ವರ್ಷಗಳಾಗಿದೆ, ಈಗ ಅದನ್ನು ಈ ಸರ್ಕಾರ ರಾಜಕೀಯ ದುರುದ್ದೇಶದಿಂದ ಬಳಸಿಕೊಳ್ಳುವುದಕ್ಕೆ ಪುನ: ಆ ನಿರ್ಣಯವನ್ನೇ ಹೊಡೆದುಹಾಕಿ ಮತ್ತೊಂದು ನಿರ್ಣಯಕ್ಕೆ ಬರುವ ಈ ಒಂದು ಕಾನೂನು ಏನಿದೆ ಇದು ಸಂವಿಧಾನಕ್ಕೆ ವಿರೋಧ. ಅಷ್ಟೇ ಅಲ್ಲ, ಇದು ಅವ್ಯವಹಾರಿಕವಾಗಿದೆ. ಇದು ರಾಜಕೀಯ ದುರುದ್ದೇಶದಿಂದ ತ್ಕಂದಿರುವುದು. ಸಮಾಜದ ಕಲ್ಯಾಣಕ್ಕಾಗಲೀ, ಜನರ ಒಂದು ಒಳಿತಿಗಾಗಲೀ ನ್ಯಾಯದಾನ ಕೊಡ್ತುವುಡಕ್ಕಾಗಲಿ ಅಲ್ಲ. ಅಕ್ಯಾಯಗಳನ್ನು ಹೆಚ್ಚು ಮಾಡುವುದಕ್ಕೆ, ಮೊಕದ್ದಮೆಗಳನ್ನು ಹೆಚ್ಚು ಮಾಡುವುದಕ್ಕೆ ಜನರಲ್ಲಿ ದ್ವೇಷವನ್ನು ಹೆಚ್ಚು ಬೆಳೆಸುವುದಕ್ಕೆ ಅವಕಾಶ ಮಾಡಿಕೊಡುವ ಈ ಒಂದು ಕಾನೂನು ತಂದದ್ದು ದುರ್ದೈವ. ನಾವು ಅಧಿಕಾರಕ್ಕೆ ಬಂದಾಗ ನಮ್ಮ ಮನಸ್ಸಿನಲ್ಲಿ ಏನಿದೆ ಅದನ್ನೆಲ್ಲಾ ನಡೆಸಿಬಿಡಬೇಕು ಎನ್ನುವುದು ಇದರಲ್ಲಿ ಸ್ಪಷ್ಟವಾಗಿ ಕಾಣುತ್ತಾ ಇದೆ. ಎಲ್ಲಿ ನ್ಯಾಯ ತೋರಿಸಿ? ಒಂದು ನಿರ್ಣಯವನ್ನು ತಾವು ಇವತ್ತು ಕೊಟ್ಟಿದ್ದೀರಿ. ಆ ನಿರ್ಣಯ ಮತ್ತೆ 10 ವರ್ಷದಲ್ಲಿ ಪುನ: ಅಧಿಕಾರ ಕೊಟ್ಟು ಪುನ: ಅದರ ವಿರುದ್ಧ ನಿರ್ಣಯ ಕೊಡಿ ಎಂದರೆ ಅದು ಸರಿಯೇ ? ಬೇರೆ ಅಪಲೇಟ್ ಅಥಾರಿಟಿಗೋ ಅಥವಾ ಮತ್ತೊಂದು, ಹೈಕೋರ್ಟಿಗೋ ಕೊಡಬೇಕು. ಅಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಏನು ಮಾಡಬೇಕೆಂದು ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ನೋಡಿ ಅವರ ಶೈಲಿ ಮಾತನ್ನು ನೋಡಿದರೆ ಈ ತಿದ್ದುಪಡಿಯಲ್ಲಿ ಏನು ಅಡಕವಾಗಿದೆ ಎಂಬುದು ಸ್ಪಷ್ಟವಾಗುತ್ತಿದೆ. ಇವರಿಗೆ ರಾಜಕೀಯ ದುರುದ್ದೇಶದಿಂದ ಬಿಟ್ಟು ಬೇರೆ ಮತ್ತೊಂದು ಇಲ್ಲ. ಈ ಹಿಂದೆ ಭೂ ನ್ಯಾಯಮಂಡಲಿ ಕೊಟ್ಟ ಕೊನೇ ತೀರ್ಪನ್ನು ನಾಲ್ಕೆಂಟು ವರ್ಷಗಳ ನಂತರ ಪುನ: ಪರಿಶೀಲನೆ ಮಾಡಿ ಮತ್ತೊಮ್ಮೆ. . . .

ಶ್ರೀ ಮಲ್ಲಿಕಾರ್ಜುನ. ಎಂ. ಖರ್ಗೆ:- ನಿಮ್ಮದು ಏನಾದರೂ ಸೀಲಿಂಗ್ ಲಿಮಿಟ್‌ನಲ್ಲಿ ಇದೆಯೋ ? ನೀವು ಪದೇ ಪದೇ ರಾಜಕೀಯ ದುರುದ್ದೇಶ ಎಂದು ಹೇಳುತ್ತಿದ್ದೀರಿ. ನಿಮ್ಮದು ಏನಾದರೂ ಇದ್ದು ಆ ಭಯ ಇದೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ, ಭಯ ನನಗೆ ಇಲ್ಲ. ನನಗೆ ಭಯ ಇದ್ದಿದ್ದರೆ ಅವರ ಎದುರಿಗೆ ಮಾತನಾಡುವುದಕ್ಕೆ ಆಗುತ್ತಾ ಇರಲಿಲ್ಲ. ಅವರ ಭಯಕ್ಕಾಗಲೀ, ಸರ್ಕಾರದ ಭಯಕ್ಕಾಗಲೀ ಅಂಜುವ ಮನುಷ್ಯ ನಾನಲ್ಲ. ಇಂದು ಅಲ್ಲ, ಎಂದೆಂದೂ ನಾನು ಅಂಜುವುದಿಲ್ಲ.

ಛೇರ್ಮನ್:- ಅವರ ಭಯ ಅಲ್ಲ, ಕಾನೂನಿನ ಭಯ ಇದೆಯೇ ಎಂದು ಕೇಳುತ್ತಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್:- ಕಾನೂನು ತಂದಿರುವುದೇ ಸಂವಿಧಾನ ಬಾಹಿರವಾದುದು. ಇದು ಟೋಟಲಿ ಇಲ್ಲೀಗಲ್. ಒಂದು ನ್ಯಾಯಾಲಯ ನಿರ್ಣಯ ಕೊಟ್ಟಮೇಲೆ ಮತ್ತೊಂದು ನ್ಯಾಯಾಲಯಕ್ಕೆ ಮತ್ತೊಂದು ಕಡೆ ಹೋಗಬೇಕೆ ಏನ: ನಾಲ್ಕೆಂಟು ವರ್ಷಗಳಾದಮೇಲೆ ಪುನ: ಪರಿಶೀಲನೆ ಮಾಡಿ ನಮ್ಮಂತೆ ತೀರ್ಪುಕೊಡಿ. ಸರ್ಕಾರ ನಮ್ಮ ಪರವಾಗಿದೆ ಎಂದು ಹೇಳಿದಹಾಗೆ ಆಗುತ್ತದೆ. ನೋಡಿ, ಮಾನ್ಯ ತಿಮ್ಮಪ್ಪನವರು ಹೌದು ಎಂದು ಹೇಳುತ್ತಿದ್ದಾರೆ. ಆ ಭಾವನೆ ಇದರಲ್ಲಿ ಅಡಕವಾಗಿದೆ. ಆ ಭಾವನೆ ಇದರಲ್ಲಿ ಅಡಕವಾಗಿದೆ ಎನ್ನುವುದಕ್ಕೆ ಅವರು ಸಮ್ಮತಿಯನ್ನು ನಗುವಿನ ಮೂಲಕ ಕೊಡುತ್ತಿದ್ದಾರೆ. ಆದರೆ ಇದರಿಂದ ಸಮಾಜಕ್ಕೆ ಆಗತಕ್ಕ ಅನ್ಯಾಯವನ್ನು ಗಮನಿಸಬೇಕು. ಯಾರೋ ಒಬ್ಬ ವ್ಯಕ್ತಿಯ ವಿಚಾರ ಇಟ್ಟುಕೊಂಡು ಮಾಡುತ್ತಿಲ್ಲ. ಕರ್ನಾಟಕ ರಾಜ್ಯದ ಸಮಗ್ರ ಜನತೆಯ ಕಲ್ಯಾಣಕ್ಕಾಗಿ ಕಾನೂನು ಮಾಡಬೇಕೇ ಏನ: ಯಾವುದೋ ವ್ಯಕ್ತಿ, ಕೋಮಿಗೆ ದ್ವೇಷ ಸಾಧಿಸುವುದಕ್ಕೆ ನಾವು ಇಲ್ಲಿ ಕಾನೂನನ್ನು ಮಾಡುತ್ತಾಹೋದರೆ ಇದಕ್ಕೆ ಕೊನೆ ಇರುವುದಿಲ್ಲ, ಅಶಾಂತಿ ಆದೀತು. ಈ ರಾಜ್ಯದಲ್ಲಿ ಅಶಾಂತಿ ಪ್ರಾರಂಭ ಮಾಡುವುದಕ್ಕೆ ಈ ಕಾನೂನು ನಾಂದಿ ಆದೀತು.ಅದಕ್ಕಾಗಿ ದಯವಿಟ್ಟು ತಾವು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

+ ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಬನ್ನಿಕೋಡ್‌ರವರು ಮಾತನಾಡುತ್ತಾ, ಸರ್ಕಾರ ಯಾವುದೇ ಒಂದು ಮಸೂದೆ ತರಲಿ ಯಾವುದೇ ಒಂದು ಕೋಮನ್ನು, ವರ್ಗವನ್ನು ದಮನ ಮಾಡುವುದಕ್ಕೆ ತುಳಿಯುವುದಕ್ಕೆ ತರುತ್ತಾರೆ ಎನ್ನತಕ್ಕ ಮಾತನ್ನು ಏನು ಪ್ರಸ್ತಾಪ ಮಾಡಿದ್ದಾರೆ ಅದು ಸರಿಯಾದುದಲ್ಲ. ಇವತ್ತು ಒಂದು ಮಸೂದೆಯನ್ನು ತರತಕ್ಕ ಕಾಲದಲ್ಲಿ ಯಾವುದೇ ಪಕ್ಷದ ಸರ್ಕಾರ ಇರಬಹುದು, ನಮಗೂ ಚಿಂತನೆ ಇದೆ, ವಿಚಾರ ಇದೆ, ಆಲೋಚನೆ ಇದೆ. ಒಂದು ಆಲೋಚನೆ ವಿಚಾರದ ಹಿನ್ನೆಲೆಯಲ್ಲಿ ಇಂತಹ ಕಾನೂನು ತರುತ್ತೇವೆ. ಅದಕ್ಕೆ ತಾವು ರಾಜಕೀಯವಾಗಿ ಬಳಸತಕ್ಕ ಮಾತುಗಳು ಏನಿವೆ ಅವು ಈ ಕಾಲದಲ್ಲಿ ಸರಿಯಾದ ಮಾತುಗಳು ಅಲ್ಲ. ಸಮಾಜವನ್ನು ಎಲ್ಲರೂ ಒಂದೇ ದೃಷ್ಟಿಯಿಂದ ನೋಡುತ್ತಾರೆ. ಯಾರೂ ಒಂದು ಸಮಾಜವನ್ನು, ಒಂದು ವರ್ಗವನ್ನು ಪ್ರತ್ಯೇಕ ಮಾಡಿ ನೋಡುವುದಕ್ಕೆ ಹೋಗುವುದಿಲ್ಲ. ಆದುದರಿಂದ ದಯವಿಟ್ಟು ಮಾನ್ಯ ಬನ್ನಿಕೋಡ್ ಅಂತಹವರು ವಿಷಯ ಪ್ರಸ್ತಾಪ ಮಾಡುವಾಗ ಸರ್ಕಾರದ ಕಾರ್ಯಕ್ರಮವನ್ನು ಹೇಳುವ ಸಂದರ್ಭದಲ್ಲಿ ಏನೋ ಒಂದು ವ್ಯಂಗ್ಯವಾಗಿ ಹೇಳುತ್ತಾ. ಒಂದು ಕಡೆ ಎತ್ತಿ ಕಟ್ಟತಕ್ಕ ಮಾತನ್ನು ದಯವಿಟ್ಟು ಕೈಬಿಡುವುದು ಒಳ್ಳೆಯದು. ಏಕೆಂದರೆ, ಇವತ್ತು ಈ ತಿದ್ದುಪಡಿ ತೀರಾ ಅವಶ್ಯಕ ಇದೆ. ಆ ಕಾರಣ ನಾವು ಕೂಡ ಅನೇಕ ಜಿಲ್ಲೆಗಳಲ್ಲಿ ತೀರ್ಮಾನಗಳನ್ನು ಮಾಡುವ ಕಾಲದಲ್ಲಿ ಕಾನೂನಿಗೆ ವಿರುದ್ಧವಾಗಿ ತೀರ್ಮಾನ ಮಾಡಿರತಕ್ಕ ಪ್ರಸಂಗಗಳು ನಮ್ಮ ಗಮನಕ್ಕೆ ಬಂದಿವೆ. ಅದನ್ನು ಸರ್ಕಾರದ ಜೊತೆಯಲ್ಲಿ ಪ್ರಸ್ತಾಪ ಮಾಡಿದಾಗ ಈ ತಿದ್ದುಪಡಿ ತರುವ ಮುಖಾಂತರ ಆ ಅನ್ಯಾಯಗಳನ್ನು ಸರಿಪಡಿಸಿಕೊಳ್ಳಬೇಕು. ಒಂದು ವೇಳೆ ಆಗಿದ್ದ ಕಾನೂನು ಪ್ರಕಾರವೇ ಮಿತಿಗಿಂತ ಜಾಸ್ತಿ ಇದ್ದ ಭೂಮಿಯನ್ನು ಪಡೆಯುವುದಕ್ಕೆ ಅವಕಾಶವಿದ್ದರೂ

ಕೂಡ ಯಾರೋ ಕೆಲವರು ಮಾಡಿದಂತಹ ತಪ್ಪಿನಿಂದ ಮುಚ್ಚಿಕೊಳ್ಳುವುದಕ್ಕೆ ಅವಕಾಶವಿದ್ದರೆ ಈಗ ಪುನರ್ ಪರಿಶೀಲನೆ ಮಾಡಬೇಕು. ಏತಕ್ಕೆ ಮಾಡಬಾರದು ಎಂದು ನಾನು ಕೇಳುತ್ತಿದ್ದೇನೆ. ಆದ್ದರಿಂದ ಮಾನ್ಯ ಬನ್ನಿಕೋಡ್‌ರವರು ಹೆದರಬೇಕಾದ ಅಗತ್ಯವಿಲ್ಲ. ಕಾನೂನಿನ ಇತಿಮಿತಿಯಲ್ಲಿ ಹಿಂದೆ ಇದ್ದ ಕಾನೂನಿನಲ್ಲಿ ತಿದ್ದುಪಡಿ ಮಾಡಿದೆ. ಅದಕ್ಕಾಗಿ ಹೊಸದಾಗಿ ಕಾನೂನು ಮಾಡಬೇಕಾದ ಅಗತ್ಯವಿಲ್ಲ. ಕಾನೂನಿನ ಇತಿಮಿತಿಯಲ್ಲಿ ಸರಿಯಿದ್ದರೆ ಸರಿಯೆಂದು ಹೇಳುವುದು, ಒಂದು ವೇಳೆ ತಪ್ಪಿನಿಂದಾಗಿ ಹೆಚ್ಚುವರಿ ಭೂಮಿಯನ್ನು ಮುಚ್ಚಿ ಹಾಕಿದ್ದರೆ ಇವತ್ತು ಅದನ್ನು ಮತ್ತೆ ಸರ್ಕಾರದ ವಶಕ್ಕೆ ತೆಗೆದುಕೊಂಡು ಬಡವರಿಗೆ ಹಂಚುವುದಕ್ಕೆ ಆಗುತ್ತದೆ. ಕಾನೂನು ಮೀರಿ ಹೋಗತಕ್ಕ ಅಗತ್ಯವಿಲ್ಲ. ಅದಕ್ಕೆ ಬಣ್ಣ ಕಟ್ಟಬೇಕಾದ ಅಗತ್ಯವಿಲ್ಲ ಎನ್ನತಕ್ಕ ಮಾತನ್ನು ತಮ್ಮ ಮುಖಾಂತರ ಬನ್ನಿಕೋಡ್‌ರವರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ:- ಈ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡಿ, ವಿಭಾಗಾಧಿಕಾರಿಗಳಿಗೆ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಲ್ಲಿ ನೀವು ಮೆಂಬರ್ ಅಲ್ಲವೇ ? ಅಲ್ಲಿ ನೀವೇ ಮೆಂಬರ್ ಇರುತ್ತೀರಿ.

ಶ್ರೀ ಬಿ. ಹೆಚ್. ಬನ್ನಿಕೋಡ್:- ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಎಷ್ಟು ಸರ್ಕಾರಿ ಭೂಮಿಯಿದೆ ಎನ್ನುವುದು ಗೊತ್ತಿಲ್ಲ. ಇದು ಅವರ ತಲೆಯಲ್ಲಿ ಹೇಗೆ ಬಂತೋ ಗೊತ್ತಿಲ್ಲ. ಇದು ಅವರ ತಲೆಯೇ ಇರಬೇಕು.

ಶ್ರೀ ಎಸ್.ಹೆಚ್. ಕೌಜಲಗಿ:- ನಾವು ಇದೇ ಬಿಲ್ ತಂದಿದ್ದರೆ ನಮ್ಮನ್ನು ಹರಿದು ತಿನ್ನುತ್ತಾ ಇದ್ದರು ಮಾನ್ಯ ಖರ್ಗೆಯವರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಓಹೋ, ಹಾಗೇನೂ ಇಲ್ಲ.

ಶ್ರೀ ಸಿ. ಬೈರೇಗೌಡ:- ನಾನು ಒಂದು ನಿಮಿಷ ಹೇಳುತ್ತೇನೆ. ಈಗ ಇದರಲ್ಲಿ ರಾಜಕೀಯ ದುರುದ್ದೇಶ ಇಲ್ಲವೆಂದು ಹೇಳುತ್ತಿದ್ದಾರೆ. ನನ್ನ ಕೋಲಾರ ತಾಲ್ಲೂಕಿನಲ್ಲಿ ಲ್ಯಾಂಡ್ ಟ್ರಿಬ್ಯುನಲ್ ರಚನೆ ಮಾಡಿದ್ದಾರೆ. ನಾನು ಆ ತಾಲ್ಲೂಕು ಪಂಚಾಯಿತಿಯ ಸಮಿತಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಕೋಲಾರ ತಾಲ್ಲೂಕಿನ ಬಹುಭಾಗ ನನ್ನ ಕ್ಷೇತ್ರದಲ್ಲಿರತಕ್ಕದ್ದು. ಮತ್ತು ಈಗಲೂ ಆಶ್ರಯ ಸ್ಕೀಮ್ ಅಡಿಯಲ್ಲಿ ನನ್ನನ್ನು ಛೇರ್ಮನ್ ಮಾಡಿದ್ದಾರೆ. ಇಷ್ಟೆಲ್ಲ ಇದ್ದರೂ ಸಹ ನನ್ನನ್ನು ಆಗಲಿ ಅಥವಾ ನಾನು ಹೇಳಿದವರನ್ನಾಗಲಿ ಲ್ಯಾಂಡ್ ಟ್ರಿಬ್ಯುನಲ್‌ಗೆ ಹಾಕಿಲ್ಲ. ಈ ವಿಚಾರವನ್ನು ನಾನು ಅವರ ಗಮನಕ್ಕೆ ತಂದಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ಎಲ್ಲೂ ಇಲ್ಲ.

ಶ್ರೀ ಸಿ.ಬೈರೇಗೌಡ:- ಕೋಲಾರ ತಾಲ್ಲೂಕಿನಲ್ಲಿ ನನ್ನ ಹೆಸರನ್ನು ತೋರಿಸಿ ? ಇದು ರಾಜಕೀಯ ದುರುದ್ದೇಶವಲ್ಲದೆ ಮತ್ತೇನು ? ನಾನು ಯಾವ ಲ್ಯಾಂಡ್ ಟ್ರಿಬ್ಯುನಲ್‌ನಲ್ಲೂ ಸದಸ್ಯನಲ್ಲ. ನಾವು ಇದಕ್ಕೆ ವಿರೋಧವಾಗಿರತಕ್ಕ ಜನ ಆಗಿದ್ದರೆ, ಹೌದು ಇವರು ವಿರೋಧಿಗಳು ಬೇಡವೆಂದು ದೂರವಿಡಬಹುದು. ಆದರೆ ನಾವು ಈ ಕಾನೂನಿಗೆ ವಿರೋಧಿಗಳಲ್ಲ. ನನ್ನ ಮನೋಭಾವನೆ ಅವರಿಗೂ ಕೂಡ ಗೊತ್ತಿದೆ, ವೈಯಕ್ತಿಕವಾಗಿ ಗೊತ್ತಿದೆ. ಹಾಗಿದ್ದರೂ ಕೂಡ ನಮ್ಮನ್ನು ಲ್ಯಾಂಡ್ ಟ್ರಿಬ್ಯುನಲ್‌ನಿಂದ ದೂರ, ಹೊರಗಡೆ ಇಡಬೇಕಾದರೆ ಇದು ರಾಜಕಾರಣವಲ್ಲದೆ ಮತ್ಯಾವ ಕಾರಣವೆಂದು ತಾವು ಹೇಳಬೇಕಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ

ನಾಯಕರಾದ ಚಂದ್ರೇಗೌಡರು ಮಾತನಾಡಿದರು, ಮಾನ್ಯ ಯಡಿಯೂರಪ್ಪನವರು ಮಾತನಾಡಿದರು.

ಶ್ರೀ ಬಿ. ಹೆಚ್. ಬನ್ನಿಕೋಡ್:- ನನ್ನ ಉದ್ದೇಶವನ್ನು ಅವರು ಹೇಳಿದರು, ಅದಕ್ಕಾಗಿ ನಾನು ಒಂದೇ ಮಾತಿನಲ್ಲಿ ಹೇಳುತ್ತಿದ್ದೇನೆ. ಆಮೇಲೆ ಮಂತ್ರಿಗಳು ಹೇಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಮ್ಮ ಉದ್ದೇಶ, ಅವರ ಉದ್ದೇಶ ಎಲ್ಲ ಗೊತ್ತಿದೆ. ನಾನು ಹೇಳಿಬಿಡುತ್ತೇನೆ, ಆಮೇಲೆ ತಾವು ಹೇಳಿ.

ಶ್ರೀ ಬಿ. ಹೆಚ್. ಬನ್ನಿಕೋಡ್:- ಇಲ್ಲಿ ಸ್ಪಷ್ಟವಾಗಿದೆ. ಸೆಕ್ಷನ್ 122 (ಎ)ರಲ್ಲಿ ಮತ್ತೆ 1995ರವರೆಗೆ ವಿಸ್ತರಿಸತಕ್ಕದ್ದು, ರಿವ್ಯೂ ಅಲ್ಲ. ಏನೋ ಒಂದು ಮಿಸ್ಟೇಕ್ ಇತ್ತು ಅಕಸ್ಮಾತ್ ಓವರ್ ಸೈಟ್ ಆಗಿತ್ತು, ಹಸ್ತಾಕ್ಷರ ದೋಷವಿತ್ತು, ಟೆಕ್ನಿಕಲ್ ಮಿಸ್ಟೇಕ್ ಇತ್ತು ಅಂದರೆ ಅದನ್ನು ರಿವ್ಯೂ ಮಾಡಲಿಕ್ಕೆ ಅಧಿಕಾರ ಕೊಟ್ಟರೆ ಅದನ್ನು ಯಾರಾದರೂ ಒಪ್ಪಬಹುದು. ಆದರೆ ಇಲ್ಲಿ ಇರತಕ್ಕದ್ದು ಏನೆಂದರೆ, ಆದಂಥ ನಿರ್ಣಯವನ್ನು ಮತ್ತೆ ಬದಲಾವಣೆ ಮಾಡಿ ಬೇರೆ ತರಾವು ಬರೆಯಲಿಕ್ಕೆ ಒಂದು ಅವಕಾಶ ಕೊಡತಕ್ಕ ಹಕ್ಕು ಇದರಲ್ಲಿದೆ. ಅದಕ್ಕೆ ಇಲ್ಲಿ ಹೇಳತಕ್ಕೆ ಕಾರಣ ಏನೆಂದರೆ,

Where the Tribunal either suo motu or otherwise, after such enquiry as it considers necessary is satisfied that an order under Sub Section (1) of sec. 67 has been obtained by fraud, misrepresentation or suppression of facts or by furnishing false, incorrect or incomplete declaration, it may, within a period of two years from the date of such order or within the 30th day of December 1995."

ಫ್ರಾಡ್, ಮಿಸ್ ರೆಪ್ರೆಸೆಂಟೇಷನ್, ಫಾಲ್ಸ್ ಡಾಕ್ಯುಮೆಂಟ್ಸ್ ಎಂದು ಹೇಳುತ್ತಾರೆ. ಅಂದರೆ ಇವತ್ತು ಕಾಗದಪತ್ರಗಳನ್ನು ಭೂನ್ಯಾಯ ಮಂಡಳಿ ಪರಿಶೀಲನೆ ಮಾಡಿ ಅಥವಾ ಯಾವುದೇ ನ್ಯಾಯಾಲಯ ತಾನು ಪರಿಶೀಲನೆ ಮಾಡಿ ಬರೆದಂತಹ ನಿರ್ಣಯ, ಕಾಗದಪತ್ರಗಳು, ಪುರಾವೆಗಳು ಸುಳ್ಳು, ತಪ್ಪಾಗಿದೆ ಆ ನಿರ್ಣಯವೂ ತಪ್ಪಾಗಿದೆಯೆಂದು ಹೇಳಿ ಪುನ: ಅಧಿಕಾರ ಕೊಡತಕ್ಕದ್ದು ಬಹುಶ: ನನಗನ್ನಿಸುತ್ತದೆ, ಈ ದೇಶದಲ್ಲಿ ಯಾವುದೇ ಕಾನೂನಿನಲ್ಲಿ ಈ ರೀತಿಯ ಅಧಿಕಾರ

(5. 20. ಪಿ. ಎಂ.)

ಕೊಟ್ಟಿದ್ದು ಇಲ್ಲ, ಅಂತಹ ನಿದರ್ಶನಗಳು ಇಲ್ಲ. ಮಾನ್ಯ ಅಧ್ಯಕ್ಷರೇ, ಈಗಾಗಲೇ ಹತ್ತು ವರ್ಷಗಳಿಂದ ನಿರ್ಣಯವಾಗಿದೆ. ಆ ಭೂಮಿಯಲ್ಲಿ ಬೋರ್‌ವೆಲ್ ಹಾಕಿದ್ದಾರೆ. ಆ ಭೂಮಿ ಬೇರೆಯವರ ಸ್ವತ್ತಾಗಿದೆ, ಮಾರಾಟವಾಗಿದೆ, ಅಭಿವೃದ್ಧಿ ಮಾಡಿದ್ದಾರೆ. ಅದರಲ್ಲಿ ಈಗಾಗಲೇ ಬಹಳಷ್ಟು ಹಣವನ್ನು ತೊಡಗಿಸಿದ್ದಾರೆ. ಯಾವ್ಯಾವುದು ಬದಲಾವಣೆಯಾಗಿದೆಯೋ, ಅಭಿವೃದ್ಧಿಯಾಗಿದೆಯೋ ಗೊತ್ತಿಲ್ಲ. ಅದನ್ನು ಪುನ: ಈ ರೀತಿ ವಿಚಾರಣೆ ಮಾಡಿ ತಮ್ಮದೇ ಆದ ನಿರ್ಣಯಕ್ಕೆ ಬರಲು ಅವಕಾಶವಿದೆ ಭೂನ್ಯಾಯ ಮಂಡಳಿಗಳಲ್ಲಿ ತಾವು ನೇಮಿಸಿದಂಥ ಪಕ್ಷದ ಜನರು ಮಾಡಿದ ಈ ನಿರ್ಣಯಕ್ಕೆ ಬದ್ಧರಾಗಬೇಕೆನ್ನುವುದು ಅನ್ಯಾಯದ ಪರಮಾವಧಿ. ಆದ್ದರಿಂದ ದಯವಿಟ್ಟು ಮಾನ್ಯ ಸಚಿವರು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು ಮತ್ತು ನ್ಯಾಯಸಮ್ಮತವಾದಂಥ, ಸರ್ವರಿಗೂ ಸಮ್ಮತವಾದಂಥ ಕಾನೂನನ್ನು ತರಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: (ಕಂದಾಯ ಮಂತ್ರಿಯವರು):- ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಶ್ರೀಮಾನ್ ಚಂದ್ರೇಗೌಡರು, ಯಡಿಯೂರಪ್ಪನವರು, ಬೈರೇಗೌಡರು ಹಾಗೂ ಪ್ರೊ ನಂಜುಂಡಸ್ವಾಮಿಯವರು, ಬನ್ನಿಕೋಡ್‌ರವರು ಮತ್ತು ಕೌಜಲಗಿಯವರು, ಡಾ. ನಂಜಪ್ಪನವರು ಈ ಒಂದು ತಿದ್ದುಪಡಿ ವಿಧೇಯಕದ ಮೇಲೆ ಮಾತನಾಡಿದ್ದಾರೆ. ಅವರುಗಳು ಮಾತನಾಡುವಾಗ ಬಹುಶ: ಈ ಸದನದಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಈ ಮೂರೂ ಅಮೆಂಡ್‌ಮೆಂಟ್‌ಗಳನ್ನು ಒಪ್ಪಿಕೊಂಡಿದ್ದಾರೆ. ಒಂದೆರಡು ಅಮೆಂಡ್‌ಮೆಂಟ್‌ಗೆ ಕೌಜಲಗಿಯವರು ಬೆಂಬಲ ಕೊಟ್ಟಿದ್ದರೆ, ಇನ್ನೆರಡು ಅಮೆಂಡ್‌ಮೆಂಟ್‌ಗಳಿಗೆ ಪ್ರೊ. ನಂಜುಂಡಸ್ವಾಮಿಯವರು ಬೆಂಬಲ ನೀಡಿದ್ದಾರೆ. ಸೆಕ್ಷನ್ 77ಕ್ಕೆ ಪ್ರೊ. ನಂಜುಂಡಸ್ವಾಮಿಯವರು ಬಿಟ್ಟು ಎಲ್ಲರೂ ಬೆಂಬಲ ನೀಡಿದ್ದಾರೆ. ಹೀಗಾಗಿ ಅರ್ಥಾತ್ ಮೂರೂ ಅಮೆಂಡ್‌ಮೆಂಟ್‌ಗಳಿಗೆ ಅಕ್ಸೆಪ್ಟಿಬಿಲಿಟಿ ಇದೆ ಎನ್ನುವುದು ಅಭಿಪ್ರಾಯ ಬಂದಿದೆ. ಎರಡನೆಯದಾಗಿ ಶ್ರೀ ಚಂದ್ರೇಗೌಡರು ಎಷ್ಟು ಎಕರೆ ಸರ್ಪ್ಲಸ್ ಲ್ಯಾಂಡ್ ಇದೆ, ಏನಾಗಿದೆ ಎನ್ನತಕ್ಕದ್ದು ಗೊತ್ತಿಲ್ಲ, ಅದನ್ನು ಹೇಳಬೇಕೆಂದರು,. ಇಲ್ಲಿಯವರೆಗೆ ಸರ್ಪ್ಲಸ್ ಲ್ಯಾಂಡ್ ಎಂದು ಡಿಟರ್‌ಮೈನ್ಡ್ ಆಗಿದ್ದು, ಸೆಕ್ಷನ್ 77 ರಲ್ಲಿ ಹಂಚಿರತಕ್ಕದ್ದು ಹೀಗಿದೆ. ಒಟ್ಟು 2 ಲಕ್ಷ 73 ಸಾವಿರದ 597 ಎಕರೆಗಳು. ಅದರಲ್ಲಿ ಸರ್ಕಾರ ವಶಪಡಿಸಿಕೊಂಡಂಥ ಜಮೀನು 1 ಲಕ್ಷ 54 ಸಾವಿರದ 739 ಎಕರೆಗಳು ಇದರಲ್ಲಿ ಷೆಡ್ಯೂಲ್ ಕ್ಯಾಸ್ಟ್ ಜನಾಂಗಕ್ಕೆ ಹಂಚಿರುವಂಥಾದ್ದು 70, 809 ಎಕರೆ ಮತ್ತು ಷೆಡ್ಯೂಲ್ ಟ್ರೈಬ್‌ನವರಿಗೆ ಹಂತಿರುವಂಥಾದ್ದು ಸುಮಾರು 2,848 ಎಕರೆಗಳು. ಇತರೆಯವರಿಗೆ ಹಂಚಿದ್ದು ಸುಮಾರು 41,196 ಎಕರೆ. ಇದು ಬೇರಯವರಿಗೆ ಕೂಡ ಹಂಚಿಕೆಯಾಗಿದೆ. ಹೀಗಾಗಿ ಒಟ್ಟು ಸುಮಾರು ಬೆನಿಫಿಶರೀಸ್ 29,752 ಎಸ್.ಸಿ, ಎಸ್.ಟಿ., ಮತ್ತು ಇತರೆ ಭೂರಹಿತ ಜನರು ಸೇರಿ ಇಷ್ಟು ಬೆನಿಫಿಷರೀಸ್. ಒಟ್ಟು ಎಕರೆಗಳು1,14,853. ಇನ್ನೂ ಡಿಸೇಪೋಸ್ ಆಗಬೇಕಾದದ್ದು ಕೇವಲ 1,397 ಎಕರೆಗಳು ಮಾತ್ರ. ಉಳಿದ ಜಮೀನು 2 ಲಕ್ಷದ 73 ಸಾವಿರ ಎಕರೆಗಳು ಹೈಕೋರ್ಟ್‌ನಲ್ಲಿ, ಟ್ರಿಬ್ಯುನಲ್‌ನಲ್ಲಿ ಲಿಟಿಗೇಶನ್‌ನಲ್ಲಿದೆ. ಅದು ಬಹಳ ಬೇಗನೆ ಡಿಸ್‌ಪೋಸ್ ಆದರೆ ಸರ್‌ಪ್ಲಸ್ ಭೂಮಿ ಏನಿದೆ, ಸುಮಾರು ಒಂದು ಲಕ್ಷ ಎಕರೆಗಿಂತ ಹೆಚ್ಚಿಗೆ ಜಮೀನು ಏನಿದೆ, ಅದನ್ನು ಹಂಚುವುದಕ್ಕೆ 7.5 ಪರ್ಸೆಂಟ್ ನಾವು ಏಕೆ ಮಾಡಿದ್ದು ಎನ್ನುವುದನ್ನು ಈಗಾಗಲೇ ನಾನು ಹೇಳಿದ್ದೇನೆ. ಲ್ಯಾಂಡ್‌ಗ್ರಾಂಟ್ ರೂಲ್ಸ್ ಪ್ರಕಾರ 50 ಪರ್ಸೆಂಟ್ ಹಂಚಬೇಕೆಂದು ಮೊದಲು ಕಾನೂನು ಇತ್ತು. ಆಮೇಲೆ ಅದಕ್ಕೆ ತಿದ್ದುಪಡಿ ತಂದು 60 ಪರ್ಸೆಂಟ್ ಕೊಡಬೇಕೆಂದು ಲ್ಯಾಂಡ್ ಗ್ರಾಂಟ್ ರೂಲ್ಸ್ ಮಾಡಿದರು. ಆದರೂ ಕೂಡ ಅದನ್ನು ಹಂಚಲಿಕ್ಕೆ ಆಗಲಿಲ್ಲ. ಬಹಳಷ್ಟು ಜನ ಎನ್‌ಕ್ರೋಚ್ ಮಾಡಿಕೊಂಡು ಇವತ್ತು ರೆಗ್ಯುಲರೈಸೇಶನ್‌ಗೆ ಬಂದಿದ್ದಾರೆ. ಇದು ಕೇವಲ 25-30 ಪರ್ಸೆಂಟ್ ಒಳಗೆ ಇದೆ. ಅಂದರೆ 50 ಪರ್ಸೆಂಟ್ ಮುಟ್ಟುವುದಕ್ಕೆ ಆಗಲಿಲ್ಲ. ಕನಿಷ್ಠಪಕ್ಷ ಇದರಲ್ಲಿ ನಾವು 25 ಪರ್ಸೆಂಟ್ ಹೆಚ್ಚಿಗೆ ಮಾಡಿದರೆ ಅದರಿಂದ ಇನ್ನೂ 30-35 ಪರ್ಸೆಂಟ್ ಹೆಚ್ಚಿನವರಿಗೆ ಸಿಗಬಹುದು. ಆದರೆ ಇದು ಅನ್‌ಕಾನ್ಸ್‌ಟ್ಯೂಶನಲ್ ಆಗುತ್ತದೆ ಎಂದು ಪ್ರೊಫೆಸರ್ ಅವರು ಹೇಳಿದರು. ಆದರೆ ಮೊನ್ನೆ ಮುಖ್ಯಮಂತ್ರಿಗಳ ಕಾನ್‌ಫರೆನ್ಸ್‌ನಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಲ್ಯಾಂಡ್ ರಿಫಾರ್ಮ್ಸ್ ಕಾನೂನು ಬಗ್ಗೆ ಒಂದು ಸಮ್ಮೇಳನವನ್ನು ಕರೆದಿದ್ದರು. ಆಗ ಅಲ್ಲಿಯೂ ಕೂಡ ಚರ್ಚೆಯಾಯಿತು. ವೆಸ್ಟ್ ಬೆಂಗಾಲ್ ಮಿನಿಸ್ಟರ್ ಚೌಧರಿ ಕನ್‌ವೀನರ್ ಆಗಿದ್ದರು, ಅಲ್ಲಿ ಒಂದು ಸಬ್ ಕಮಿಟಿ ಮಾಡಿತ್ತು. ಆಗ ಅವರು ಒಂದು ನಿರ್ಣಯ ತೆಗೆದುಕೊಂಡರು. The entire conference took a decision that the entire supplus land should be distributed

only to scheduled caste people. ಆ ಹಳ್ಳಿಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಜನ ಇಲ್ಲದೇಹೋದರೆ, ಪಕ್ಕದ ಹಳ್ಳಿಯ ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಕೊಡಬೇಕು, ಒಂದು ವೇಳೆ ಪಕ್ಕದ ಹಳ್ಳಿಯಲ್ಲೂ ಇರಲಿಲ್ಲವೆಂದರೆ, ಆಮೇಲೆ ಬೇರೆ ಲ್ಯಾಂಡ್‌ಲೆಸ್ ಪರ್ಸನ್ಸ್‌ಗೆ ಕೊಡತಕ್ಕಂಥ ನಿರ್ಣಯವನ್ನು ತೆಗೆದುಕೊಂಡರು. ಮತ್ತೆ ಅಲ್ಲಿರತಕ್ಕ ಆರ್.ಡಿ.ಪಿ.ಆರ್. ಸೆಕ್ರೆಟರಿ, ಏಕೆಂದರೆ ಅಗ್ರಿಕಲ್ಚರ್ ಮತ್ತು ಆರ್.ಡಿ.ಪಿ.ಆರ್. ಡಿಪಾರ್ಟ್‌ಮೆಂಟ್‌ಗೆ ಈ ರೆವಿನ್ಯೂ ಡಿಪಾರ್ಟ್‌ಮೆಂಟ್ ಬರುತ್ತದೆ. ಅಲ್ಲಿ ಎಲ್ಲವನ್ನೂ ಪರಿಶೀಲನೆ ಮಾಡಿ, ಹೆಚ್ಚು ಭೂಮಿಯನ್ನು ಹಂಚುವುದರಲ್ಲಿ ಯಾವ ತಾಪತ್ರಯ ಇಲ್ಲ, ಆದುದರಿಂದ ಇದು ಕಾನ್‌ಸ್ಟಿಟ್ಯೂಷನ್ ಬಾಹಿರ ಆಗತಕ್ಕ ಪ್ರಶ್ನೆ ಇಲ್ಲ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೂ ಕೂಡ ಹೇಳುತ್ತೇನೆ, ಯಾರಾದರೂ ಹೋದರೆ ಮುಂದೆ ನೋಡೋಣ. ಆದರೆ ಬೆನಿಫಿಟ್ ಇದೆ. ಇದರೊಳಗೆ ಬೇರೆ ಯಾವ land available to Government ಇದೆ ಅದನ್ನು ಸರ್ಕಾರ ಲ್ಯಾಂಡ್ ರಿಫಾರಮ್ಸ್‌ನಲ್ಲಿ ಯಾವ ರೀತಿಯಾಗಿ ಹಂಚಬೇಕೆಂದು ತೀರ್ಮಾನ ತೆಗೆದುಕೊಂಡಿರುತ್ತದೆಯೇ ಹೊರತು ಅದರ ಬಗ್ಗೆ ಬೇರೆಯವರಿಗೆ ಚಾಲೆಂಜ್ ಮಾಡತಕ್ಕ ಅಧಿಕಾರ ಬರುವುದಿಲ್ಲವೆಂದು ನನ್ನ ಭಾವನೆ. ಒಂದು ವೇಳೆ ಬಂದರೆ ಮುಂದೆ ನೋಡೋಣ. ಆದರೆ, ಸದ್ಯಕ್ಕೆ ಅವರಿಗೆ ನ್ಯಾಯ ಕೊಡಬೇಕೆಂದರೆ, ಅವರು ರೆಗ್ಯುಲರೈಸೇಷನ್‌ನಲ್ಲಿ ಏನು ಸರ್ಕಾರಿ ಭೂಮಿಯನ್ನು ಕಳೆದುಕೊಂಡಿದ್ದಾರೋ, ಆ ಕಾನೂನಿನ ಅಡಿಯಲ್ಲಿ ಕನಿಷ್ಟಪಕ್ಷ ಈ ಕಾನೂನಿನ ಅಡಿಯಲ್ಲಾದರೂ ಅವರಿಗೆ ಸಹಾಯ ಮಾಡೋಣ ಎನ್ನುವ ದೃಷ್ಟಿಯಿಂದ ಇದನ್ನು ತಂದಿದ್ದೇವೆ. ಇದಕ್ಕೆ ಎಲ್ಲರೂ ಒಪ್ಪಿಗೆ ಕೊಟ್ಟಿದ್ದಾರೆ. ಮಾನ್ಯ ಬೈರೇಗೌಡರು ಹೇಳಿದರು, ಇಂಡಿವಿಜುಯಲ್ ಸ್ಕೂಲ್ ಬಿಲ್ಡಿಂಗ್‌ಗೆ ಮಾತ್ರ ಕೊಡಬೇಕು ಮತ್ತು ಕಂಪನಿಗಳಿಗೆ, ಸೊಸೈಟಿಗಳಿಗೆ ಕೊಡತಕ್ಕ ಅವಶ್ಯಕತೆ ಇರಲಿಲ್ಲ, ಇದು ಬರೀ ಪೇಪರ್‌ನಲ್ಲಿರತಕ್ಕ ಸಂಸ್ಥೆಗಳಿಗೆ ಮಾತ್ರ ಲಾಭವಾಗುತ್ತದೆ, ನಿಜವಾದ ಶಿಕ್ಷಣ ಸಂಸ್ಥೆಗಳಿಗೆ ಲಾಭವಾಗುವುದಿಲ್ಲ ಎಂಬ ಮಾತನ್ನು ಹೇಳಿದರು. ಅದಕ್ಕೆ ನಾವು ಇದರಲ್ಲಿ ಸ್ಪಷ್ಟಪಡಿಸಿದ್ದೇವೆ. " recognised by Government of Karnataka or Central Government" ಇಂತಹ ಸ್ಕೂಲುಗಳಿಗೆ ಮಾತ್ರ ನೇರವಾಗಿ ಅಗ್ರಿಕಲ್ಚರ್ ಲ್ಯಾಂಡನ್ನು ಪರ್ಚೇಸ್ ಮಾಡಬೇಕು. ಈಗ ಏನು ಮಾಡುತ್ತಿದ್ದಾರೆ ಎನ್ನುವುದನ್ನು ಹೇಳುತ್ತೇನೆ. ಅವರು ನೇರವಾಗಿ ಲ್ಯಾಂಡ್ ಅಕ್ವಿಸಿಷನ್‌ಗೆ ಬರಬೇಕು, ಸರ್ಕಾರಕ್ಕೆ ದುಡ್ಡು ಡಿಪಾಸಿಟ್ ಮಾಡಬೇಕು 4 (1), 5(1), 6 (1) Notification and Award, position ತೆಗೆದುಕೊಳ್ಳುವುದಕ್ಕೆ 2-3 ವರ್ಷ ತಿರುಗಿ, ನಮ್ಮ ಇಲಾಖೆಯಲ್ಲಾ ತಿರುಗಿ ಬೇಸರದಿಂದ ಹೋಗುತ್ತಾರೆ. ಮತ್ತು ಅದು ಲಂಚಕ್ಕೂ ಒಂದು ಜಾಗ. ಆದುದರಿಂದ ಇದೆಲ್ಲವನ್ನೂ ಕೂಡ ನಾವು ತೆಗೆಸಿ, ನೇರವಾಗಿ ಒಂದು ಸ್ಕೂಲು ಮಾಡಬೇಕೆಂದರೆ, 5 ಎಕರೆ ಪರ್ಚೇಸ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಏಕೆಂದರೆ, ಈ ತಾಪತ್ರಯಗಳು ತಪ್ಪಿ ಹೋಗಬೇಕು. ಜೊತೆಗೆ ಸರ್ಕಾರದವರು ಕಂಡೀಷನ್ ಹಾಕುತ್ತೇವೆ. ಸ್ಕೂಲ್ ತೆಗೆಯಬೇಕೆಂದರೆ, ಒಂದು ಆಟದ ಮೈದಾನ ಇರಬೇಕು, 5 ಎಕರೆ ಜಾಗ ಇರಬೇಕು, ಅಂತಹವರು 25 ಸಾವಿರ ರೂಪಾಯಿ ಡಿಪಾಸಿಟ್ ಇರಬೇಕು, ಇವೆಲ್ಲಾ ಕಂಡೀಷನ್ ಹಾಕುತ್ತೇವೆ. ಒಂದು ಕಡೆ ನಾವೇ ಕಂಡೀಷನ್ ಹಾಕುತ್ತೇವೆ, ಇನ್ನೊಂದು ಕಡೆ ಸ್ಕೂಲ್ ಕೊಡುವುದಕ್ಕೆ ಮುಂಚೆ ಅಕ್ವಿಸಿಷನ್ ಹೇಗೆ ಮಾಡುತ್ತೀರಿ, ಈ ಕಷ್ಟವನ್ನು ಇದೇ ಸದನದಲ್ಲಿ ಅನೇಕ ಮಾನ್ಯ ಸದಸ್ಯರು ಹೇಳಿದಮೇಲೆ, ನಾನು ಕರೆಸಿಕೊಂಡು ಚರ್ಚೆ ಮಾಡಿ ಇದನ್ನು ತಂದಿದ್ದೇನೆಯೇ ಹೊರತು ಬೇರೆ ಯಾವ ದುರುದ್ದೇಶದಿಂದ ತಂದಿಲ್ಲ ಯಾರಿಗೂ 5 ಎಕರೆಗೆ ರಿಯಾಯಿತಿ ಕೊಡಬೇಕೆಂಬ ಪ್ರಶ್ನೆ ಇಲ್ಲ.

ನಿಮಗೆ ಗೊತ್ತಿದೆ, ಇವತ್ತು ಇಷ್ಟು ಕಾನೂನು ಇದ್ದರೂ ಕೂಡ ಬೇರೆ ಇಂಡಿವಿಜುಯಲ್ ಪರ್ಚೇಸ್ ಮಾಡಿ, ಕನ್‌ವರ್ಟ್ ಮಾಡಿಕೊಂಡು ಆಮೇಲೆ ತಮ್ಮ ಸೊಸೈಟಿ ಹೆಸರಿಗೆ ರಿಜಿಸ್ಟರ್ ಮಾಡಿಕೊಳ್ಳುತ್ತಾರೆ. ಆದ್ದರಿಂದ ಇದೆಲ್ಲ ಹಾಕಿಸಿ ಪ್ರೂವೈಡ್ ಮಾಡಬೇಕೆಂಬ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ಆಮೇಲೆ ಇಂಡಸ್ಟ್ರಿಯಲ್ ವಿಚಾರದಲ್ಲಿ ಕೇಂದ್ರಸರ್ಕಾರದ ನಿರ್ದೇಶನ ಕೂಡ ಬಂದಿದೆ. ನಮ್ಮ ರಾಜ್ಯದವರೂ ಕೂಡ ಪ್ರೈವೇಟ್ ಎಂಟರ್‌ಪ್ರೈಸಸ್‌ಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು, ಇಂಡಸ್ಟ್ರೀಸ್ ಹೆಚ್ಚು ಬೆಳೆಯಬೇಕೆಂಬ ದೃಷ್ಟಿಯಿಂದ ಹಾಗೂ ಹೆಚ್ಚು ಆಕರ್ಷಣೆ ಮಾಡಿಕೊಳ್ಳಬೇಕು ಎನ್ನತಕ್ಕಂಥ ದೃಷ್ಟಿಯಿಂದ, ಕೆ.ಐ.ಡಿ.ಬಿ.ಗೆ. ಲಿ ಇಲ್ಲಿ ಹೋಗಿ ಅನೇಕ ಹಳ್ಳಿಗಳಲ್ಲಿ ತಿರುಗಾಡುವುದಕ್ಕೆ ಆಗುವುದಿಲ್ಲ. ಬೇಕಾದರೆ, ಬೆಂಗಳೂರು ಸಿಟಿಯಲ್ಲಿ, ಮಂಗಳೂರು ಸಿಟಿಯಲ್ಲಿ, ಮೈಸೂರು ಸಿಟಿಯಲ್ಲಿ ಹುಬ್ಬಳ್ಳಿ ಧಾರವಾಡ ಮತ್ತು ಜಿಲ್ಲಾಮಟ್ಟದಲ್ಲಿ ಸಾಧ್ಯವಿದೆ. ಆದರೆ, ಹಳ್ಳಿಗಳಲ್ಲಿ ಕೆ.ಐ.ಡಿ.ಬಿ. ನವರು ಐಡೆಂಟಿಫೈ ಮಾಡುವುದು ಯಾವಾಗ, ಅಕ್ವೈರ್ ಮಾಡುವುದು ಯಾವಾಗ, ಅವರಿಗೆ ಕೊಡುವುದು ಯಾವಾಗ? ಅದಕ್ಕಾಗಿ ಅವರಿಗೆ ಕೊನೇಪಕ್ಷ ಎರಡು ಯೂನಿಟ್ ಅಂದರೆ, 10 ಎಕರೆ ನೇರವಾಗಿ ಪರ್ಚೇಸ್ ಮಾಡಿ, ಕನ್‌ವರ್ಟ್ ಮಾಡಿಕೊಂಡು, ಇಂಡಸ್ಟ್ರೀ ಹಾಕಲಿ ಎನ್ನತಕ್ಕಂಥ ಉದ್ದೇಶದಿಂದ ತಂದಿದ್ದೇವೆ. ಒಂದು ವೇಳೆ ಇದು ದುರುಪಯೋಗವಾದರೆ, ಪುನ: ಪರಿಶೀಲಿಸಿ ಬೇಕಾದರೆ ನಾವು ವಿತ್ ಡ್ರಾ ಮಾಡಿಕೊಳ್ಳೋಣ. ಆದರೆ, ಸದುದ್ದೇಶದಿಂದ ತಂದಿದ್ದೇವೆ, ಇದರಲ್ಲಿ ಮಾಲಾಫೈಡ್ ಉದ್ದೇಶ ಇಲ್ಲ, ಸಹಾಯ ಮಾಡಬೇಕೆಂಬ ದೃಷ್ಟಿಯಿಂದ, ಇಂಡಸ್ಟ್ರಿಯಾಲಿಸ್ಟ್‌ಗಳಿಗಾಗಲೀ, ಸ್ಕೂಲುಗಳಿಗಾಗಲೀ, ಚಾರಿಟಿ ಸಂಸ್ಥೆಗಳಿಗಾಗಲೀ ಸಹಾಯಮಾಡಬೇಕೆಂಬ ದೃಷ್ಟಿಯಿಂದ ತಂದಿದದ್ದೇವೆಯೇ ಹೊರತು ಬೇರೆ ಯಾವ ದುರುದ್ದೇಶವೂ ಇಲ್ಲ. ಸೆಕ್ಷನ್ 122-ಎ ಬಗ್ಗೆ ಮಾನ್ಯ ಬನ್ನಿಕೋಡ್ ಅವರು ಹೇಳಿದರು. ಇದರಲ್ಲಿ ರಾಜಕೀಯ ದುರುದ್ದೇಶ ಇದೆ, ಪೊಲಿಟಿಕಲಿ ಮೋಟಿವೇಟೆಡ್ ಇದೆ, ಹತ್ತು ವರ್ಷ ಆದಮೇಲೆ ಇವತ್ತು ತರುತ್ತಿದ್ದೀರಿ ಎಂದು ಹೇಳಿದರು. ಸ್ವಾಮಿ, ಇದರಲ್ಲಿ ಯಾವ ದುರುದ್ದೇಶವೂ ಇಲ್ಲ, ರಾಜಕೀಯ ದುರುದ್ದೇಶವೂ ಇಲ್ಲ, ನಾವು ತಂದಿದ್ದು ಏತಕ್ಕೆಂದರೆ, ಅನೇಕ ಕಡೆ ಬೇನಾಮಿ ಟ್ರಾನ್ಸ್‌ಕ್ಷನ್ ನಡೆದಿದೆ. ಕೆಲವು ಕಡೆ ಫ್ಯಾಕ್ಸ್ ಪ್ರಪ್ರೆಸ್ ಮಾಡಿರುತ್ತಾರೆ. ಮೊನ್ನೆ ಪ್ರೈಮ್ ಮಿನಿಸ್ಟರ್‌ರವರು ಸ್ವತ: ಹೇಳಿದರು. ಆಂಧ್ರದಲ್ಲಿ, ಬಿಹಾರದಲ್ಲಿ ಕೆಲವು ಕಡೆ ಮೋತಿ ಎಂದು ಹೆಸರು ಕೊಟ್ಟು ಮಾಡಿದ್ದಾರೆ ಎಂದರು. ಮೋತಿ ಎಂದರೆ ನಾಯಿ ಹೆಸರೂ ಆಗಬಹುದು, ಮನುಷ್ಯರ ಹೆಸರೂ ಆಗಬಹುದು. ಆ ಹೆಸರಿನಲ್ಲಿಯೂ ಕೂಡ ಸೀಲಿಂಗ್ ಇಟ್ಟುಕೊಂಡಿದ್ದಾರೆ. ಅಂದರೆ ಲ್ಯಾಂಡ್ ಅದರ ಹೆಸರಿನಲ್ಲಿಯೂ ಕೂಡ ಇಟ್ಟುಕೊಂಡಿದ್ದಾರೆ ಎಂದು ಹೇಳಿದರು. ಇದು ಪೇಪರ್‌ನಲ್ಲಿ ಕೂಡ ಬಂತು, ನಾವು ಓದಿರಬಹುದು. ಯಾರು ಬೇನಾಮಿ ಟ್ರಾನ್ಸ್‌ಕ್ಷನ್ ಮಾಡಿರುತ್ತಾರೆ, ಯಾರು ಫ್ಯಾಕ್ಸ್‌ನ ಸಪ್ರೆಸ್ ಮಾಡಿರುತ್ತಾರೆ, ಯಾರು ಫ್ರಾಡುಲೆಂಟರಿ ಡಿಕ್ಲರೇಷನ್ ಪಡೆದುಕೊಂಡಿರುತ್ತಾರೆ, ಅಂತಹವರಿಗೆ ಮಾತ್ರ ಕೈ ಹಚ್ಚಬೇಕೆಂಬ ಉದ್ದೇಶದಿಂದ ಇದನ್ನು ತಂದಿದದ್ದೇವೆ, ಅದನ್ನೂ ಕೂಡ ಲ್ಯಾಂಡ್ ಟ್ರಿಬ್ಯುನಲ್‌ನವರು ಮಾಡುತ್ತಾರೆ. ನಿಮಗೆ ಗೊತ್ತಿದೆ, ಸರಕಾರದ ಪಾತ್ರ ಇದರಲ್ಲಿ ಎಷ್ಟಿದೆ ಎಂದು ಗೊತ್ತಿದೆ. ಸರಕಾರ ನೇರವಾಗಿ ಜಡ್ಜ್‌ಮೆಂಟ್ ಬರೆಯುವ ಹಾಗೆ ಇಲ್ಲ, ಸರಕಾರ ಕರೆಸಿ ಇದೇ ರೀತಿಯಾಗಿ ನೀವು ಮಾಡಬೇಕೆಂದು ಹೇಳುವಹಾಗೆ ಇಲ್ಲ. ಏನು ಮಾಡಿದರೂ ಕೂಡ ಅಸಿಸ್ಟೆಂಟ್ ಕಮೀಷನರ್‌ರವರ ನೇತೃತ್ವದಲ್ಲಿ ನಾನ್ ಆಫಿಷಿಯಲ್ ಮೆಂಬರ್ಸ್ ಏನಿದ್ದಾರೆ, ಟ್ರಿಬ್ಯುನಲ್‌ನಲ್ಲಿ ಅವರು ಮಾತ್ರ ಮಾಡಬಹುದೇ ಹೊರತು ಬೇರೆ ಯಾರೂ ಮಾಡುವಹಾಗೆ ಇಲ್ಲ. ಭೂ ಸುಧಾರಣಾ ಕಾನೂನನ್ನು ಒಪ್ಪಿಕೊಳ್ಳುತ್ತೇನೆ. ಕೇವಲ ಈ ಕಡೆ ಕುಳಿತವರಷ್ಟೇ ಅಲ್ಲ,

ಎಲ್ಲರೂ ಕೂಡ ಆ ಕಾಲದಲ್ಲಿ ಇದಕ್ಕೆ ಸಪೋರ್ಟ್ ಮಾಡಿದವರು. 1974ರಲ್ಲಿ ವಿರೋಧ ಪಕ್ಷದಲ್ಲಿದ್ದಂಥ ಶ್ರೀಮಾನ್ ಭೈರೇಗೌಡರು, ದೇವೇಗೌಡರು ಬೊಮ್ಮಾಯಿಯವರು ಎಲ್ಲರೂ ಸಪೋರ್ಟ್ ಮಾಡಿರುತ್ತಾರೆ. ಅದೇ ರೀತಿ ಈ ಕಡೆಯವರೂ ಕೂಡ ಸಪೋರ್ಟ್ ಮಾಡಿದ್ದಾರೆ. ಬಹಳ ಆಸಕ್ತಿ ವಹಿಸಿ ಪ್ರಗತಿಪರವಾದ ಈ ಕಾನೂನನ್ನು ತಂದಿದ್ದೇವೆ. ಇದಕ್ಕೆ ಸಂಪೂರ್ಣವಾಗಿ ಎಕ್ಸೆಂಪ್ಷನ್ ಕೊಡಬೇಕೆಂದು ಗೌರ್ನಮೆಂಟ್ ಆಫ್ ಇಂಡಿಯಾದವರು ಬರೆದಿದ್ದರು. ಆದರೆ ನಾನು ಒಪ್ಪಲಿಲ್ಲ. ನಾನು ಕೇವಲ ಎಕ್ಸೆಟೆಂಟ್ ಆಫ್ ಟು ಯೂನಿಟ್ಸ್ ವಿತ್ ಗ್ರೇಟ್ ಡಿಫಿಕಲ್ಟಿ ಒಪ್ಪಿದೆ ನಾನು ಏತಕ್ಕೆ ಒಪ್ಪಿದೆ ಎಂದರೆ, ಅನೇಕ ಸಲ ಬೇರೆ ಬೇರೆ ಯಾರೋ ಬಂದು ಹೇಳಬಹುದು, ಪಾವ್ ಇಂಡಸ್ಟ್ರೀ ಮಾಡುತ್ತೇವೆ, ಅದು ಮಾಡುತ್ತೇವೆ, ಇದು ಮಾಡುತ್ತೇವೆ, ಪ್ಲಾಂಟೇಷನ್ ಮಾಡುತ್ತೇವೆ ಎಂದು ತೆಗೆದುಕೊಂಡು ಅವರು ಇಟ್ಟುಕೊಳ್ಳಬಹುದು ಎಂಬ ಭಯ ನನಗೂ ಇದೆ. ಕೊನೆಗೆ ನಾನು ಏನೆಂದು ಹೇಳಿದೆಯೆಂದರೆ, ಅಟ್‌ಲೀಸ್ಟ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ ಅನುಕೂಲ ಆಗಲಿ ಎಂದು ಎರಡು ಯೂನಿಟ್‌ಗಳಿಗೆ ಮಾತ್ರ ತಿದ್ದುಪಡಿ ತಂದಿದ್ದೇವೆ. ಬಾಕಿಯದು ಅವರು ಯಾರಿಗಾದರೂ ಜಮೀನು ಬೇಕಾದರೆ ಕೆ.ಐ.ಡಿ.ಬಿ ಇದೆ, ಅವರಲ್ಲಿ ನೇರವಾಗಿ ಹೋಗಬೇಕು, ತೆಗೆದುಕೊಳ್ಳಬೇಕು ಎಂಬುದು ನನ್ನ ಉದ್ದೇಶ. ಅದಕ್ಕೆ ಇದರಲ್ಲಿ ಯಾವುದೂ ಕೂಡ ತೊಂದರೆ ಇಲ್ಲ. ಮತ್ತು ಯಾರಿಗೂ ಕೂಡ ಹೆರಾಸ್‌ಮೆಂಟ್ ಮಾಡಬೇಕೆಂಬ ಉದ್ದೇಶದಿಂದ ಈ ಕಾನೂನು ತಂದಿಲ್ಲ. ಸೆಕ್ಷನ್122-ಎ ನಲ್ಲಿ ಕೂಡ ಯಾರು ಪರ್‌ಪಸ್‌ಲಿ ಮಿಸ್ ಚೀಫ್ ಮಾಡಿರುತ್ತಾರೆ, ಯಾರು ಇನ್‌ಟೆನ್‌ಷನಲಿ ಕಾನೂನು ವಯಲೇಟ್ ಮಾಡಿರುತ್ತಾರೆ ಅಥವಾ ಇದನ್ನು ತಪ್ಪಿಸಿಕೊಂಡು ಜಮೀನನ್ನು ಇಟ್ಟುಕೊಂಡಿರುತ್ತಾರೆ, ಅಂತಹವರಿಗೆ ಮಾತ್ರ ಸ್ವಲ್ಪ ತಾಪತ್ರಯ ಆಗಬಹುದೇ ಹೊರತು ಬೇರೆ ಯಾರು ಕಾನೂನು ಪ್ರಕಾರ ಡಿಕ್ಲರೇಷನ್ ಮಾಡಿಕೊಂಡಿರುತ್ತಾರೆ ಅವರಿಗೆ ತಾಪತ್ರಯ ಕೊಡತಕ್ಕಂಥಾದ್ದು, ತೊಂದರೆ ಕೊಡತಕ್ಕದ್ದು ಹೆರಾಸ್‌ಮೆಂಟ್ ಮಾಡತಕ್ಕ ಯಾವ ಪ್ರಮೇಯವೂ ಬರುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಮತ್ತು ಈ ಕಾನೂನಿಗೆ ಈಗಲಾದರೂ ತಾವು ಒಪ್ಪಿಗೆ ಕೊಡುತ್ತೀರಿ ಎಂದು ನನಗನ್ನಿಸುತ್ತದೆ. ಏತಕ್ಕೆಂದರೆ, ಕಾನೂನು ಪ್ರಕಾರ ಅಪ್ರೂವ್ ಆದರೆ ಬಹುಶ: ಬಡವರಿಗೆ ಸಹಾಯವಾಗುತ್ತದೆ, ಫ್ಯಾಕ್ಟ್ಸ್ ಸಪ್ರೆಸ್ ಮಾಡಿ ಯಾರು ಡಿಕ್ಲರೇಷನ್ ತೆಗೆದುಕೊಂಡಿದ್ದಾರೆ ಅಂತಹವರ ಜಮೀನನ್ನು ಹೊರಗೆ ತೆಗೆಯುವುದಕ್ಕೆ ಅವಕಾಶವಾಗುತ್ತದೆ. ಇನ್ನೊಂದು ವಿಚಾರವನ್ನು ಮಾನ್ಯ ಬೈರೇಗೌಡರು ಹೇಳಿದರು. ಬೆಂಗಳೂರು ಸುತ್ತಮುತ್ತ 10-15 ಸಾವಿರ ಎಕರೆ ಜಮೀನು ಇದೇ ರೀತಿ ಸಪ್ರೆಸ್ ಮಾಡಿರುತ್ತಾರೆ ಎಂದು ಹೇಳಿದರು. ಈಗ ಲ್ಯಾಂಡ್ ಟ್ರಿಬ್ಯೂನಲ್ಸ್ ಇಲ್ಲದಿದ್ದರೂ ಕೂಡ ಸಂಬಂಧಪಟ್ಟ ಡೆಪ್ಯುಟಿ ಕಮೀಷನರ್ ಮತ್ತು ಡಿವಿಜಿನಲ್ ಕಮೀಷನರ್‌ರನ್ನು ಕರೆಸಿ ಈ ಕೇಸಸ್‌ನ್ನೂ ಕೂಡ ತಾವು ರಿವ್ಯೂ ಮಾಡಬೇಕು, ಎಲ್ಲೆಲ್ಲಿ ಈ ರೀತಿಯ ಕೇಸಸ್ ಪೆಂಡಿಂಗ್ ಇದೆ, ಯಾವ ಯಾವ ಕೇಸಸ್ ಪೆಂಡಿಂಗ್ ಇವೆ, ಇದರ ಅಡಿಯಲ್ಲಿ ಹಾಕಿದಂಥ ಕೇಸಸ್, ಅದೇ ರೀತಿಯಾಗಿ ಡಿಸ್‌ಪೋಸ್ ಮಾಡದೇ ಕೆಲವು ಇಟ್ಟುಕೊಳ್ಳುತ್ತಾರೆ, ಅಂಥವನ್ನು ಪೂರ್ತಿಯಾಗಿ ಪರಿಶೀಲನೆ ಮಾಡಿ ಅದಕ್ಕೆ ಕಾನೂನು ಪ್ರಕಾರ ಯಾವ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ಆದೇಶ ನೀಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ:- ಯಾವರೀತಿ ಮಾಡಿರುತ್ತಾರೆ ಎಂದರೆ, ಮೊದಲು 12 ಸಾವಿರ ರೂಪಾಯಿಗಳಿಗಿಂತ ಹೆಚ್ಚು ಆದಾಯ ಇರತಕ್ಕಂಥವರಿಗೆ , ವ್ಯವಸಾಯಗಾರರು ಅಲ್ಲದಿರತಕ್ಕಂವರಿಗೆ ಭೂಮಿಯನ್ನು ಕೊಂಡುಕೊಳ್ಳುವುದಕ್ಕೆ ಅವಕಾಶ ಇರಲಿಲ್ಲ. ಅಂತಹ

ಸಾವಿರಾರು ಎಕರೆಗಳು ಇವತ್ತಿನ ದಿವಸ ಇಲ್ಲಿ ಖರೀದಿ ಆಗಿವೆ. ಆದು ನಿಮ್ಮ ಎದುರಿಗೆ ಇದೆ. ಇವತ್ತಿನ ದಿವಸ ನಿಮ್ಮಲ್ಲಿ ದಾಖಲೆಗಳು ಇವೆ. ಇವತ್ತು ಒಂದಲ್ಲ ಎರಡಲ್ಲ ಸಾವಿರಾರು ನಡೆದಿವೆ. ಆದರಲ್ಲಿ ದೊಡ್ಡ ದೊಡ್ಡ ಜನರು ಇದ್ದಾರೆ. ದೊಡ್ಡ ದೊಡ್ಡವರೆಲ್ಲಾ ಕೂಡ ಇದ್ದಾರೆ. ಈ ಕಾನೂನಿನಲ್ಲಿ ನಿಮಗೆ ಇರತಕ್ಕಂಥ ಅಧಿಕಾರವನ್ನು ಉಪಯೋಗಿಸಿಕೊಂಡು ದಯವಿಟ್ಟು ಇದರ ಮೇಲೆ ಕ್ರಮ ತೆಗೆದುಕೊಳ್ಳಿ, ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇದನ್ನು ನಾನು ಇಲ್ಲಿ ಕಳೆದ 3-4 ವರ್ಷಗಳಿಂದ ಹೇಳುತ್ತಿದ್ದೇನೆ, ಇದೇ ಉತ್ತರ ನನಗೆ ಬರುತ್ತಿದೆ.

ಛೇರ್ಮನ್:- ಈ ಸರ್ಕಾರ ಬಂದು ಎರಡು ವರ್ಷ ಆಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನೀವು ಎಲ್ಲಿ ಕೇಳಿದಿರಿ, ಕೇಳಿದವರು ನಾವು.

ಶ್ರೀ ಸಿ.ಬೈರೇಗೌಡ:- ನೀವು ಕೇಳಿದ್ದೀರಿ ಎಂದು ಇಟ್ಟುಕೊಳ್ಳೋಣ. ಈಗ ತಮಗೆ ಅವಕಾಶ ಇದೆ ಏತಕ್ಕೆ ಮಾಡಿಲ್ಲವೆಂದು ನಾನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ಹೇಳಿದ ವಿಷಯವನ್ನು ತೆಗೆದುಕೊಂಡು ಎಲ್ಲವನ್ನೂ ಕೂಡ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್:- ಮಾನ್ಯ ಸಚಿವರು ನಾನು ಪ್ರಾಮಾಣಿಕವಾಗಿ ಸೆಕ್ಷನ್ 122 (ಎ) ತಂದಿದ್ದೇನೆಂದರು. ಮಾನ್ಯ ಅಧ್ಯಕ್ಷರೇ, ಇಲ್ಲಿ ಇರತಕ್ಕಂಥಾದ್ದು ಏನೆಂದರೆ 1984ನೇ ಇಸವಿಯಿಂದ ಈ ವಿಚಾರಗಳು ನಿರ್ಣಯವಾಗಿವೆ, ಠರಾವು ಆಗಿವೆ. 1984 ರಿಂದ 1992ರವರೆಗೆ ಬೇರೆಯವರು ತಮ್ಮ ಅವಶ್ಯಕತೆಗೆ ಅನುಗುಣವಾಗಿ ಆ ಭೂಮಿಯನ್ನು ವಿಲೇವಾರಿ ಮಾಡಿರುತ್ತಾರೆ, ಮಾರಾಟ ಮಾಡಿದ್ದಾರೆ. ಡ್ರೈ ಲ್ಯಾಂಡ್‌ಗೆ ಪಂಪ್‌ಸೆಟ್ಸ್ ಹಾಕಿರುತ್ತಾರೆ, ನೀರಾವರಿ ಮಾಡಿರುತ್ತಾರೆ, ಕೆಲವರು ರೇಷ್ಮೆ ಅಭಿವೃದ್ಧಿ ಮಾಡಿರಬಹುದು. ಅಥವಾ ಡೈರಿ ಅಭಿವೃದ್ಧಿ ಮಾಡಿರಬಹುದು, ಇಂಡಸ್ಟ್ರಿ ಆಗಿರಬಹುದು. ಈಗ ಪುನ: ಪರಿಶೀಲನೆ ಎನ್ನುವ ಹೆಸರಿನಲ್ಲಿ ಸುಮ್ಮೋ ಮೋಟೋ ಅವರು ಅರ್ಜಿ ಆದರೂ ಕೊಡಬಹುದು, ಬಿಟ್ಟುಬಿಡುತ್ತಾರೆಯೇ ? ಅರ್ಜಿ ಕೊಡಿಸುವವರಿದ್ದಾರೆ. ಬೇರೆಯವರು ಅರ್ಜಿ ಕೊಡಿಸಿದ ಮೇಲೆ ಇದು ಎಲ್ಲಾ . . .Mr. CHAIRMAN:- You have to take such precautions if necessary.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ತಪ್ಪು ಮಾಡಿದವರು ಯಾರೇ ಆಗಿರಲಿ ಅನುಭವಿಸಬೇಕಾಗುತ್ತದೆ. ತಮಗೆ ಗೊತ್ತಿದೆ \ ಪಿ.ಟಿ.ಸಿ. ಆಕ್ಟ್‌ನಲ್ಲಿ we have restored all the properties . . . . ಕಾನೂನು ವೈಲೇಟ್ ಮಾಡಿ ಪರ್ಚೇಸ್ ಮಾಡಿದ್ದರೆ ಆದನ್ನು ರೆಸ್ಟೋರ್ ಮಾಡಿದ್ದೇವೆ. ಏನು ಮಾಡುವುದಕ್ಕಾಗುತ್ತದೆ?

ಶ್ರೀ ಬಿ. ಹೆಚ್. ಬನ್ನಿಕೋಡ್:- ಮಾನ್ಯ ಸಚಿವರು ಯಾವ ನ್ಯಾಯಾಲಯ ಎಂದು ಹೇಳುತ್ತಿದ್ದಾರೆ ಭೂ ನ್ಯಾಯ ಮಂಡಲಿ ದಾಖಲೆಗಳನ್ನು ಪುರಾವೆಗಳನ್ನು ನಿಮ್ಮ ಅಧಿಕಾರಿಗಳ ಮೂಲಕ ಏನೋ ಆದು ಒಂದು ಹೆಸರನ್ನು ಹೇಳಿದಿರಲ್ಲ ಮೋತಿ ಎಂದು, ಮೋತಿ ಎಂದರೆ ನಾಯಿ ಆದರೂ ಆಗಬಹುದು, ಇಲ್ಲವೇ ಮನುಷ್ಯನಾದರೂ ಆಗಬಹುದು. ನಿಮ್ಮ ಅಧಿಕಾರಿಗಳು ಮೋತಿ ಮನುಷ್ಯನೆಂದು ಹೇಳಿದ್ದರೆ, ನಿರ್ಣಯ ಕೊಡುವವರು ಮನುಷ್ಯನೆಂದು ಕೊಟ್ಟಿರುತ್ತಾರೆ. ಮೋತಿ ನಾಯಿಯೆಂದು ಹೇಳಿದ್ದರೆ ಅದೇರೀತಿ ನಿರ್ಣಯ ಕೊಟ್ಟಿರುತ್ತಾರೆ. ಆದು ಏನಾದರೂ ತಪ್ಪಾಗಿದ್ದರೆ ನಿಮ್ಮ ಆಡಳಿತದಲ್ಲಿ, ನೀವು ದಾಖಲೆಗಳನ್ನು ಸೃಷ್ಟಿಸಿದ್ದೀರಿ. ಇದು ನಿಮ್ಮ ತಪ್ಪಿನಿಂದ ಆಗಿರಬೇಕೇ ವಿನ: ನ್ಯಾಯ ಮಂಡಲಿ ಕೊಟ್ಟಿಂತಹ ನಿರ್ಣಯ ಆಗುವುದಿಲ್ಲ. ನಿರ್ಣಯ ಅಲ್ಲಿ ದಾಖಲೆಗಳನ್ನು

ಆಧರಿಸಿರುತ್ತದೆ. ಬಹುಶ: ಪುನ: ಕೊಡುವುದಕ್ಕೆ ಕೊನೆ ಇಲ್ಲವೇ. ಹೈಕೋರ್ಟ್‌ನಿಂದ ಆಗಲಿ, ಸುಪ್ರೀಂ ಕೋರ್ಟ್‌ನಿಂದ ಇರಬಹುದು ಅದಕ್ಕೆ ಒಂದು ಹಂತ ಬೇಕು. ಅದೇ ನ್ಯಾಯ ಮಂಡಲಿ ಪುನ: ಪುನ: ಫ್ರಾಡ್ ಅಥವಾ ರೆಪ್ರೆಸೆಂಟೇಷನ್ ಎಂದು ಹೇಳಿಕೊಳ್ಳುತ್ತಾ ಹೋದರೆ ಇಲ್ಲಿ ಅಡಗಿರುವ ದುರುದ್ದೇಶ ಏನು ? ಅಲ್ಲಿ ಆಗಿರತಕ್ಕಂಥ ಒಂದು ಸಾಮಾಜಿಕ ಅಶಾಂತಿಯನ್ನು ಉದ್ಭವ ಮಾಡಲಿಕ್ಕೆ ಇರತಕ್ಕಂಥ ದುರುದ್ದೇಶ ಎಂದು ನಾನು ಸ್ಪಷ್ಟವಾಗಿ ಈ ಸದನದ ಮೂಲಕ ತಮಗೆ ಹೇಳುತ್ತೇನೆ. ಇದರ ಹಿಂದೆ ಅಡಗಿರತಕ್ಕಂಥಾದ್ದು ಏನೆಂದರೆ, ಕೆಲವು ಜನರ ಮೂಲಕ ಅರ್ಜಿ ಕೊಡಿಸಿ ಆ ಜನರಿಗೆ ನೋವು ಉಂಟು ಮಾಡಬೇಕು, ಇದರಲ್ಲಿ ರಾಜಕೀಯ ದುರುಪಯೋಗ ಮಾಡಿಕೊಳ್ಳಬೇಕು ಎಂಬ ಹವಣಿಕೆ ಹೊಂಚು ಅಡಗಿದೆಯೇ ಹೊರತು ಇಲ್ಲಿ ಸಾಮಾಜಿಕವಾದ ನ್ಯಾಯ ಇಲ್ಲ. ಇಲ್ಲಿ ನ್ಯಾಯ ಇಲ್ಲ . . . .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಮ್ಮ ತಲೆಯಲ್ಲಿ ಇದು ರಾಜಕೀಯ ದುರುದ್ದೇಶ ಎಂದು ಇದ್ದರೆ ನಾನು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಬಿ. ಎಚ್. ಬನ್ನಿಕೋಡ್:- ಭೂ ನ್ಯಾಯ ಮಂಡಲಿಗೆ ಬಿಟ್ಟು ಮೇಲ್ಮನವಿಯನ್ನು ಕೊಡಲಿಕ್ಕೆ ಪ್ರಾವಿಷನ್ ಹೈಕೋರ್ಟ್‌ಗೆ ಅಥವಾ ಬೇರೆಯವರಿಗೆ ತಾವು ಅಧಿಕಾರ ಕೊಟ್ಟರೆ ಪುನ: ಇದನ್ನು ಪರಿಶೀಲಿಸಿ ತಪ್ಪಾಗಿದ್ದರೆ ನೋಡಬಹುದು. ಆದರೆ ನಾನು ಕೊಡುವಂತಹ ನಿರ್ಣಯವನ್ನು ನಾನೇ ಪರಿಶೀಲನೆ ಮಾಡುವುದು. ಎನ್ನುವುದನ್ನು ತಂದರೆ ಆಗ ಇದ್ದಂತಹ ಸದಸ್ಯರೇ ಬೇರೆ. ಇವತ್ತು ಇರುವಂತಹ ಸದಸ್ಯರೇ ಬೇರೆ. ಈಗ ನಾಮಕರಣ ಮಾಡಿದಂತಹ ಸದಸ್ಯರು ಇರುತ್ತಾರೆ. ಅವರು ನಿಮ್ಮ ಕೈಯಲ್ಲಿ ಇರತಕ್ಕಂಥ ಜನಗಳು. ಅವರ ಮೂಲಕ ಈ ಜನಗಳನ್ನು ಗೋಳಾಡಿಸತಕ್ಕಂಥ ಕೆಲಸವನ್ನು ದಯವಿಟ್ಟು ನೀವು ಮಲ್ಲಿಕಾರ್ಜುನ ಖರ್ಗೆಯವರೇ ಮಾಡಬೇಡಿ. ನನಗೇನೋ ಇದು ಸರಿಯಾಗಿ ಕಾಣಿಸುವುದಿಲ್ಲ. ಆದ್ದರಿಂದ ದಯವಿಟ್ಟು ಇದನ್ನು ತಾವು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ, "ಕರ್ನಾಟಕ ಭೂ ಸುಧಾರಣಾ(ತಿದ್ದುಪಡಿ) ವಿಧೇಯಕ 1992ನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 4ರವರೆಗೆ:-

ಛೇರ್ಮನ್:- "ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಛೇರ್ಮನ್:- ಪ್ರಸ್ತಾವ ಏನೆಂದರೆ: "ಮೊದಲನೇ ಖಂಡ, ದೀರ್ಘ್ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ್ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೇ, 1992ರ ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವನೆ ಏನೆಂದರೆ: "1992ರ ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

7. 1992 ರ ಕರ್ನಾಟಕ ಹೋಮಿಯೋಪಥಿ ವೃತ್ತಿನಿರತ ವೈದ್ಯರ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜಿ.ಪುಟ್ಟಸ್ವಾಮಿ ಗೌಡ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಯವರು):- ಮಾನ್ಯ ಅಧ್ಯಕ್ಷರೇ, 1992ರ ಕರ್ನಾಟಕ ಹೋಮಿಯೋಪಥಿ ವೃತ್ತಿನಿರತ ವೈದ್ಯರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಜಿ.ಪುಟ್ಟಸ್ವಾಮಿ ಗೌಡ :-ಮಾನ್ಯ ಅಧ್ಯಕ್ಷರೇ, ಇದು ಒಂದು ಅತಿ ಸಣ್ಣ ತಿದ್ದುಪಡಿ. ಈ ತಿದ್ದುಪಡಿಯಲ್ಲಿ ರಿಜಿಸ್ಟರ್ಡ್ ಪ್ರಾಕ್ಟೀಷನರ್ಸ್ ನೋಂದಣಿ ಹಂತದಲ್ಲಿ ಎ ಮತ್ತು ಬಿ ಎಂದು ಎರಡು ವರ್ಗದ ನೋಂದಣಿಗಳು ಇದ್ದು, ಅದಕ್ಕೆ ಈಗ ಚುನಾವಣೆ ಆಗಬೇಕಾಗುತ್ತದೆ. ಆ ಚುನಾವಣೆಯಲ್ಲಿ ಎ ವರ್ಗದಲ್ಲಿ ಸದಸ್ಯರು 1490 ಜನ ಇದ್ದಾರೆ, ಬಿ ವರ್ಗದಲ್ಲಿ ಕೇವಲ 9 ಜನ ಇದ್ದಾರೆ. ಈ ಎರಡು ವರ್ಗಗಳಿಂದ ಆಯ್ಕೆಯಾಗಬೇಕಾದಂಥವರು 5 ಜನ. ಅದನ್ನು ನಾವು ಒಟ್ಟಿಗೆ ಇಟ್ಟು 6 ಜನರನ್ನು ಆಯ್ಕೆ ಮಾಡತಕ್ಕಂಥ ಒಂದು ಸಣ್ಣ ತಿದ್ದುಪಡಿ. ಈ ತಿದ್ದುಪಡಿಗೆ ಬಹುಶ: ಚರ್ಚೆ ಆಗತ್ಯ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ದಯವಿಟ್ಟು ಇದಕ್ಕೆ ತಾವೆಲ್ಲ ಅನುಮತಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ "1992ರ ಕರ್ನಾಟಕ ಹೋಮಿಯೋಪತಿ, ವೃತ್ತಿನಿರತ ವೈದ್ಯರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು..

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2:

ಛೇರ್ಮನ್:- "2ನೇ ಖಂಡ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(2ನೇ ಖಂಡ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಛೇರ್ಮನ್:- ಪ್ರಸ್ತಾವ ಏನೆಂದರೆ, "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)